ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಎಸ್.ಬಂಗಾರಪ್ಪ(ಮುಖ್ಯಮಂತ್ರಿಗಳು):- ಮಾನ್ಯ ಅಧ್ಯಕ್ಷರೆ, 1992ರ ಕರ್ನಾಟಕ ಮನರಂಜನೆ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಛೇರ್ಮನ್:-* ವಿಧೇಯಕವನ್ನು ಮಂಡಿಸಲಾಗಿದೆ *

2. 1992ರ, ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ತಿದ್ದುಪಡಿ) ವಿಧೇಯಕ ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಕೆ.ಜೆ.ಜಾರ್ಜ್: (ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು):- ಮಾನ್ಯ ಅಧ್ಯಕ್ಷರೆ, 1992ರ, ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಛೇರ್ಮನ್:- ಪ್ರಸ್ತಾವ ಏನೆಂದರೆ :" 1992ರ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಕೆ.ಜೆ.ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು):- ಮಾನ್ಯ ಅಧ್ಯಕ್ಷರೆ, 1992ರ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಛೇರ್ಮನ್:- ವಿಧೇಯಕವನ್ನು ಮಂಡಿಸಲಾಗಿದೆ. 1992ರ ಕರ್ನಾಟಕ ದಂಡ ಪ್ರಕ್ರಿಯಾ ಸಂಹಿತೆ (ಕರ್ನಾಟಕ ತಿದ್ದುಪಡಿ) ವಿಧೇಯಕ ಮಂಡನೆಗೆ ಅನುಮತಿ ಕೋರಿಕೆ.

ಶ್ರೀ ಡಿ.ಕೆ.ಶಿವಕುಮಾರ್ (ಬಂಧೀಖಾನೆ ಮತ್ತು ಗೃಹರಕ್ಷಕ ರಾಜ್ಯ ಮಂತ್ರಿಗಳು):- ಮಾನ್ಯ ಅಧ್ಯಕ್ಷರೆ, 1992ರ ಕರ್ನಾಟಕ ದಂಡ ಪ್ರಕ್ರಿಯಾ ಸಂಹಿತೆ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಛೇರ್ಮನ್:- ಪ್ರಸ್ತಾವ ಏನೆಂದರೆ : "1992 ರ ಕರ್ನಾಟಕ ದಂಡ ಪ್ರಕ್ರಿಯಾ ಸಂಹಿತೆ (ಕರ್ನಾಟಕ ತಿದ್ದುಪಡಿ) ವಿಧೇಯಕ ವನ್ನು ಮಂಡಿಸಲು ಅನುಮತಿ ನೀಡುವುದು "

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಡಿ.ಕೆ.ಶಿವಕುಮಾರ್ (ಬಂಧೀಖಾನೆ ಮತ್ತು ಗೃಹರಕ್ಷಕ ರಾಜ್ಯ ಮಂತ್ರಿಗಳು):- ಮಾನ್ಯ ಅಧ್ಯಕ್ಷರೆ, 1992ರ ಕರ್ನಾಟಕ ದಂಡ ಸಂಹಿತೆ(ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಛೇರ್ಮನ್:-* ವಿಧೇಯಕವನ್ನು ಮಂಡಿಸಲಾಗಿದೆ *

ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

1992ರ ಕರ್ನಾಟಕ ಮಾರಾಟ ತೆರಿಗೆ (ತಿದ್ದುಪಡಿ) ವಿಧೇಯಕ

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಸ್.ಬಂಗಾರಪ್ಪ:(ಮುಖ್ಯ ಮಂತ್ರಿಗಳು):- ಮಾನ್ಯ ಅಧ್ಯಕ್ಷರೆ,1992ರ ಕರ್ನಾಟಕ ಮಾರಾಟ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ. ಪ್ರಸ್ತಾವವನ್ನು ಮಂಡಿಸಲಾಯಿತು.

ಶ್ರೀ ಎಸ್.ಬಂಗಾರಪ್ಪ: (ಮುಖ್ಯಮಂತ್ರಿಯವರು):- ಮಾನ್ಯ ಅಧ್ಯಕ್ಷರೆ, ಈ ತಿದ್ದುಪಡಿ ವಿಧೇಯಕವನ್ನು ಮಂಡಿಸುವುದಕ್ಕೆ ಕಾರಣವನ್ನು ಈಗಾಗಲೇ ನಾನು ಒಂದು ಪಟ್ಟಿ ಮಾಡಿ

ಸದನದಲ್ಲಿ ಹೇಳಿದ್ದೇನೆ. ಯಾವ ಯಾವ ವಿಷಯಗಳಲ್ಲಿ ತಿದ್ದುಪಡಿಗಳನ್ನು ತರಬೇಕು ಅದರ ಉದ್ದೇಶವೇನು ಎಂಬುದನ್ನು ಈಗಾಗಲೇ ಹೇಳಿದ್ದೇನೆ. ಈ ವಿದೇಯಕದಲ್ಲಿ ಸಂಪೂರ್ಣವಾದ ವಿವರಣೆಯನ್ನು ನಾನು ಕೊಟ್ಟಿದ್ದೇನೆ. ಉದಾಹರಣೆಗೆ ಅಲ್ಯೂಮಿನಿಯಂ ಪಾತ್ರೆಗಳನ್ನು ಬಡವರು ಉಪಯೋಗ ಮಾಡುವಂಥಾದ್ದು. ಇದರ ಮೇಲಿರತಕ್ಕ ಸೇಲ್ಸ್ ಟ್ಯಾಕ್ಸ್‌ನ್ನು ಕಡಿಮೆ ಮಾಡಿದೆ. ಇದೇ ರೀತಿಯಲ್ಲಿ ಬೆಲ್ಲದ ಮೇಲಿನ ತೆರಿಗೆಯನ್ನು ಕಡಿಮೆ ಮಾಡಿದೆ. Tax on jaggery we have reduced from 3% to 2.5%, as it is a poor man's sugar. The revenue loss works out to about 70 lakhs. ಇಷ್ಟಾದರೂ ಕೂಡ ನಾವು ಇದರ ಮೇಲಿನ ತೆರಿಗೆಯನ್ನು ಕಡಿಮೆ ಮಾಡತಕ್ಕ ತಿದ್ದುಪಡಿಯನ್ನು ಇಲ್ಲಿ ತಂದಿದ್ದೇವೆ. ಇನ್ನು ಅಲ್ಯೂಮಿನಿಯಂ ಪಾತ್ರೆಗಳ ಮೇಲಿನ ತೆರಿಗೆಯನ್ನು 3 ಪರ್ಸೆಂಟ್‌ನಿಂದ 2 ಪರ್ಸೆಂಟ್‌ಗೆ ಇಳಿಸಿದ್ದೇವೆ. Because that is mostly made use of by poor people of the society. The Revenue loss is about 30 lakhs rupees. ಇಷ್ಟು ನಷ್ಟವಾದರೂ ಕೂಡ ನಮ್ಮ ರಾಜ್ಯದ ಬಡಜನರಿಗೆ ಅನುಕೂಲವಾಗಲೆಂಬ ದೃಷ್ಟಿಯಿಂದ ಇದನ್ನು ಮಾಡಿದ್ದೇವೆ. Increaseof tax on bicycles, its parts and accessories including tyres and tubes. ಇದನ್ನು ಬಡವರು ಉಪಯೋಗ ಮಾಡುತ್ತಾರೆಂಬ ದೃಷ್ಟಿಯಿಂದ ಇದರ ಮೇಲಿನ ತೆರಿಗೆಯನ್ನುಸಂಪೂರ್ಣವಾಗಿ ತೆಗೆದು ಹಾಕಿದ್ದೇವೆ. The revenue loss is about 100 lakhs of rupees i.e., Rs. 1 Crore. ಆಮೇಲೆ ಬಿದಿರು ಕಡ್ಡಿಯನ್ನು ಊದುಬತ್ತಿ ತಯಾರು ಮಾಡುವುದಕ್ಕೆ ಹೆಚ್ಚು ಉಪಯೋಗ ಮಾಡುತ್ತಿರುವುದರಿಂದ ಇದರ ಮೇಲಿ ತೆರಿಗೆಯನ್ನೂ ಕೂಡ 10 ಪರ್ಸೆಂಟ್‌ನಿಂದ4 ಪರ್ಸೆಂಟ್‌ಗೆ ಇಳಿಸಿದ್ದೇವೆ. ಆದರೆ 6 ಪರ್ಸೆಂಟನ್ನು ತೆಗೆದುಹಾಕಿದ್ದೇವೆ. The revenue loss works out to about Rs. 15 lakhs . Tax on spectacles, sunglasses, goggles, lenses, frames, other than those imported from outside the country. ಇದನ್ನು ಬಿಟ್ಟರೆ ಉಳಿದುದರಮೇಲೆ ವಿಧಿಸಿದ್ದ ತೆರಿಗೆಯನ್ನು ಸಂಪೂರ್ಣವಾಗಿ ತೆಗೆದುಹಾಕಿದ್ದೇವೆ. ಇದು ಅಂಧರ ವರ್ಷ. ಅದರ ದಿನಾಚರಣೆಗೆ ಸಂಬಂಧಪಟ್ಟರತಕ್ಕಂಥ ವಿಚಾರ ಹೌದು. Total loss works out to round about Rs. 30 lakhs. ಅದನ್ನು ಬೇರೆ ತಂದಿದ್ದೇವೆ. ಅದೇ ರೀತಿಯಲ್ಲಿ Tax on gold and silver articles and jewellery will be reduced to 2% to prevent diversion of trade. ಕೇಂದ್ರ ಸರ್ಕಾರದವರು ಕೂಡ ಅದರಮೇಲೆ ಇದು ಮಾಡಿದ್ದಾರೆ. ನಾವು ಕೂಡ ತತ್ಸಮಾನವಾಗಿ ಇಟ್ಟುಕೊಂಡಿರುತ್ತೇವೆ. ಟ್ರೇಡ್ ಡೈವರ್ಟ್ ಆಗಬಾರದು ಎನ್ನುವ ದೃಷ್ಟಿಯಿಂದ ಅದನ್ನು ಕೂಡ ಮಾಡಿದ್ದೇವೆ. ಅದನ್ನು ಕ್ವಾಂಟಿಫೈ ಮಾಡುವುದಕ್ಕಾಗುವುದಿಲ್ಲ. ಎಷ್ಟು ಲಾಸ್ ಆಗಬಹುದೆಂದು ನಾವು ಮಾಡುವುದಕ್ಕಾಗಿಲ್ಲ. ಅದನ್ನು ಮಾಡುವುದಕ್ಕೂ ಕೂಡ ನಾವು ತಿಳಿಸಿದ್ದೇವೆ. ಅದೇ ರೀತಿಯಲ್ಲಿ ಈ ಪ್ಲಾಸ್ಟಿಕ್‌ಗೆ ಟ್ಯಾಕ್ಸ್ proposed tax on plastic household articles manifacture wholly out of plastic scrap. ಪ್ಲಾಸ್ಟಿಕ್ ವಸ್ತುಗಳನ್ನು ಹಳೆಯದಾದ ಮೇಲೆ ತೆಗೆದು ಬಿಸಾಕಿಬಿಡುತ್ತಾರೆ. ಅದನ್ನು ಮತ್ತೆ ತೆಗೆದುಕೊಂಡು ಹೋಗಿ ಕರಗಿಸಿ ಮಾಡುತ್ತಾರೆ. ಸಾವಿರಾರು ಜನ ಅದರಿಂದ ಜೀವನ ಮಾಡತಕ್ಕಂಥವರು ಕೂಡ ಇದ್ದಾರೆ. ಅದು ಬಡವರಿಗೆ ಉಪಯೋಗವಾಗುತ್ತದೆ. Tax will

be limited to articles costing Rs. 30 and above. ಟ್ಯಾಕ್ಸ್ ಬೀಳತಕ್ಕಂಥದ್ದು

ರೂಪಾಯಿ ಮೂವತ್ತರ ಮೇಲೆ ಇರತಕ್ಕಂಥದ್ದಕ್ಕೆ ಬೀಳುತ್ತದೆ. ಅದರ ಒಳಗಡೆ ಇರತಕ್ಕಂಥದ್ದಕ್ಕೆ ಬರುವುದಿಲ್ಲ. ರೆವಿನ್ಯೂ ಲಾಸ್ ಅಂದಾಜಿರತಕ್ಕಂಥದ್ದು 15 ಲಕ್ಷ ರೂಪಾಯಿ ಬರುತ್ತದೆ.

ಆಮೇಲೆ ಪರ್ಚೇಸ್ ಟ್ಯಾಕ್ಸ್ ಆನ್ ಶುಗರ್ ಕೇನ್, ಅದನ್ನೂ ಕೂಡ ಇದರಲ್ಲಿ ತರುತ್ತಿದ್ದೇವೆ. ಮಂಡ್ಯ, ಮೈಸೂರಿನದು, ತಮಿಳುನಾಡಿನ ಕಡೆ ಹೋಗುತ್ತದೆ. ಬೆಳಗಾವ್ ಡಿಸ್ಟ್ರಿಕ್ಟ್‌ನದು ಆ ಕಡೆ ಹೋಗುತ್ತದೆ. ಅದು ರೆಟ್ರಾಸ್‌ಪೆಕ್ಟೀವ್ ಎಫೆಕ್ಟ್ ಕೊಟ್ಟು ಮಾಡಿದ್ದೇವೆ. ಈ ತಿಂಗಳ ಮೂರರಂದು ಆಯವ್ಯವಯ ಮಂಡನೆ ಮಾಡಿದ್ದೇನೆ. ಏತಕ್ಕೆಂದರೆ, ನಾನು ತಕ್ಷಣ ಜಾರಿಗೆ ಕೊಟ್ಟಿದ್ದೇವೆನ್ನುವ ಮಾತನ್ನು ಈ ಸದನದಲ್ಲಿ ನಾನು ಆಡಿದ್ದೆ. ಅದಕ್ಕೆ ಅನುಗುಣವಾಗಿ 3-3-1992ರಂದು ನಾವು ಅದನ್ನು ಜಾರಿಗೆ ಕೊಡುವಾಗ ರೆಟ್ರಾಸ್‌ಪೆಕ್ಟೀವ್ ಎಫೆಕ್ಟ್ ಕೊಟ್ಟು ಮಾಡಿದ್ದೇವೆ. ನಾವು ತಂದಿರತಕ್ಕಂಥ ಇಷ್ಟೂ ವಿಷಯಗಳು ನಮ್ಮ ಬಿಲ್‌ಗಳಲ್ಲಿ ಬರುತ್ತದೆ. ಅದರ ಬಗ್ಗೆ ಸೂಟಬಲ್ ಅಮೆಂಡ್‌ಮೆಂಟ್ ಏನು ಬಂದಿದೆ ಎನ್ನತಕ್ಕಂಥಾದ್ದನ್ನು ಕೂಡ ಕಂಡಿದ್ದೇವೆ. ನಾವು ಅದರ ಬಗ್ಗೆ ಏನು ಹೊಸದಾಗಿ ಹೇಳಲಿಲ್ಲ. ಇದಿಷ್ಟೂ ಕೂಟ ಅನೌನ್ಸ್ ಮಾಡಿರತಕ್ಕಂಥ ವಿಚಾರಗಳು ಈ ಅಮೆಂಡ್‌ಮೆಂಟನ್ನು ಕೂಡ ನಾವು ಬಿಲ್‌ನಲ್ಲಿ ತಂದಿದ್ದೇವೆ. ಇದನ್ನು ಸದನದಲ್ಲಿ ಒಪ್ಪಿಗೆಗಾಗಿ ಮಂಡನೆ ಮಾಡಿದ್ದೇನೆ. ಅದಕ್ಕೆ ಈ ಸದನ ಅನುಮತಿ, ಒಪ್ಪಿಗೆ ಕೊಡಬೇಕೆಂದು ತಮ್ಮ ಮುಖಾಂತರ ಈ ಸದನವನ್ನು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಸಿ.ಬೈರೇಗೌಡ : (ವೇಮಗಲ್):- ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿರತಕ್ಕಂಥ ವಾಣಿಜ್ಯ ತೆರಿಗೆಗಳ ತಿದ್ದುಪಡಿ ಮಸೂದೆಯನ್ನು ವಿರೋಧಿಸಿ ಕೆಲವು ಮಾತುಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮೊದಲನೆಯದಾಗಿ ನಾನು ಇದೇ ಸದನದಲ್ಲಿ 2-3 ಸಾರಿ ಪ್ರಸ್ತಾಪ ಮಾಡಿದ್ದೇನೆ. ಅದೇನೆಂದರೆ, ಇವತ್ತು ಮೋಟಾರ್ ವಾಹನಗಳುಇವೆ. ಈ ಮೋಟಾರುವಾಹನಗಳ ಮೇಲಿರತಕ್ಕಂಥ ಸುಂಕ ಏನಿದೆ ಇದು ಒಂದೊಂದು ರಾಜ್ಯದಲ್ಲಿ ಒಂದೊಂದುರೀತಿ ಇದೆ. ನಮ್ಮ ರಾಜ್ಯದಲ್ಲಿ ಎಲ್ಲ ರಾಜ್ಯಗಳಿಗಿಂತಲೂ ಹೆಚ್ಚಿನ ಸುಂಕ ಇದೆ. ಒಂದು ಮೋಟಾರ್ ವೆಹಿಕಲ್‌ಗೆ 20 ರಿಂದ 25 ಸಾವಿರ ರೂಪಾಯಿಗಳವರೆಗೂ ಸೇಲ್ಸ್ ಟ್ಯಾಕ್ಸ್ ಕೊಡಬೇಕಾಗುತ್ತದೆ. ಆದರೆ ನಾನು ಬೇರೆ ಯಾವುದೇ ಉದಾಹರಣೆಯನ್ನು ಹೇಳುವುದಕ್ಕೆ ಹೋಗುವುದಿಲ್ಲ. ಎರಡು ವರ್ಷದ ಹಿಂದೆ ನನಗೆ ನಮ್ಮ ಕ್ಷೇತ್ರದ ಜನತೆಗೆ ಒಂದು ಕಾರನ್ನು ಬಳುವಳಿಯಾಗಿ ಕೊಟ್ಟರು. ಆ ಕಾರನ್ನು ತಂದುದು ಎಲ್ಲಿಂದ ಎಂದರೆ ಪಾಂಡಿಚೇರಿಯಿಂದ. ಆ ರಾಜ್ಯಕ್ಕೂ , ಕರ್ನಾಟಕ ರಾಜ್ಯಕ್ಕೂ ವ್ಯತ್ಯಾಸ ಎಷ್ಟಿದೆ ಎಂದರೆ ಹತ್ತು ಸಾವಿರ ರೂಪಾಯಿಗಳಷ್ಟು ಸೇಲ್ಸ್‌ಟ್ಯಾಕ್ಸ್ ವ್ಯತ್ಯಾಸವಿದೆ. ಕಳೆದಸಾರಿಯಡ ನಾನು ಇದೇ ವಿಚಾರವನ್ನು ಪ್ರಸ್ತಾಪ ಮಾಡಿದ್ದೆ. ಪಾಂಡಿಚೇರಿಯಿಂದ ಕಾರ್ ಅಥವಾ ಲಾರಿ, ಅಥವಾ ಟ್ರಕ್ ಅಥವಾ ಯಾವುದೇ ಮೋಟಾರ್ ವೆಹಿಕಲ್‌ನ್ನು ತರಿಸಿದರೂ ಸುಮಾರು 10 ಸಾವಿರ ರೂರಾಯಿಗಳಷ್ಟು ವ್ಯತ್ಯಾಸವಿದೆ. ನಾನು ಅವತ್ತಿನ ದರದ ಪ್ರಕಾರ ಇಷ್ಟು ವ್ಯತ್ಯಾಸವಿದಯೆಂದು ಹೇಳುತ್ತಿದ್ದೇನೆ. ಇವತ್ತು ಎಷ್ಟಿದೆಯೋ ಅದನ್ನು ವಿಚಾರ ಮಾಡಲಿಕ್ಕೆ ಆಗಿಲ್ಲ. ಆದ್ದರಿಂದ ಹತ್ತು ಸಾವಿರರೂಪಾಯಿ ಮಿಕ್ಕುತ್ತದೆ. ಸಾಕಾಣಿಕೆ ವೆಚ್ಚ ಒಂದೂ, ಒಂದೂವರೆ ಸಾವಿರ ರೂಪಾಯಿ ಕೊಟ್ಟರೆ ಇಲ್ಲಿಗೆ ವಾಹನಗಳು ಬರುತ್ತದೆ. ಕಾರೇ ಆಗಲಿ, ಲಾರಿಯೇ ಆಗಲಿ, ಯಾವುದಾದರೂ ಬರುತ್ತದೆ. ಒಂದು ಕಾರ್, ಒಂದು ಲಾರಿ ಅಥವಾ ಒಂದು ಚಾಸಿ ತೆಗೆದುಕೊಂಡರು 20-25-30 ಸಾವಿರ ಸೇಲ್ಸ್ ಟ್ಯಾಕ್ಸ್

ಬರಬಹುದೆಂದು ಅನ್ನಿಸುತ್ತದೆ. ನೀವು ಕೇವಲ ಈ ಚೌಕಾಸಿ ವ್ಯಾಪಾರ ವ್ಯವಹಾರದಲ್ಲಿ ಇರುವುದರಿಂದ ಒಂದು ಪೈಸೆ ಕೂಡ ಬರುವುದಿಲ್ಲ,

(1-15 ಪಿ. ಎಂ)

ಪೂರ್ತಿಯಾಗಿ ಟ್ಯಾಕ್ಸ್‌ನಲ್ಲಿಯೇ ಹೊರರಾಜ್ಯಕ್ಕೆ ಹೋಗುತ್ತಿದೆ. ಇದು ಬೇಡ. ಕೊನೇಪಕ್ಷ ನೀವು ಅನ್‌ಎಕನಾಮಿಕಲ್ ಆಗಿಯಾದರೂ ಮಾಡಿ. ಈ ರೀತಿ ಹತ್ತು ಸಾವಿರ ರೂಪಾಯಿ ವ್ಯತ್ಯಾಸ ಇದ್ದರೆ ಯಾರೂ ಕರ್ನಾಟಕದಲ್ಲಿ ಕಾರಾಗಲಿ, ಯಾವ ವಾಹನವನ್ನಾಗಲಿ ಕೊಂಡು ಕೊಳ್ಳುವುದಿಲ್ಲ, ಬೇರೆ ಕಡೆ ಹೋಗುತ್ತಾರೆ. ಆದುದರಿಂದ ಈ ಟ್ಯಾಕ್ಸ್ ಅನಾಮತ್ತಾಗಿ ಬೇರೆ ರಾಜ್ಯಕ್ಕೆ ಹೋಗುತ್ತಿದೆ. ಈ ರೀತಿ ಪ್ರತಿ ವರ್ಷ ಸಾವಿರಾರು ಗಾಡಿಗಳು ಬೇರೆ ಕಡೆಯಿಂದ ಬರುತ್ತಿದೆ. ಮೋಟಾರ್ ಸೈಕಲ್‌ನಿಂದ ಹಿಡಿದು ಕಾರು, ಲಾರಿ, ಬಸ್ ಚಾಸಿಗಳು ಗೊವಾದಿಂದ ಬರುತ್ತವೆ. ಇಲ್ಲದಿದ್ದರೆ ಪಾಂಡಿಚೆರಿಯಿಂದ ಬರುತ್ತಿದೆ. ಇದನ್ನು ಹೋದಸಾರಿಯೇ ನಾನು ಪ್ರಸ್ತಾಪ ಮಾಡಿದ್ದೆ. ಮುಖ್ಯ ಮಂತ್ರಿಗಳು ಬಡ್ಜೆಟ್ ಪ್ರೆಸೆಂಟ್ ಮಾಡುವುದಕ್ಕೆ ಮೊದಲೇ ಈ ರೀತಿ ಆಗುತ್ತಿದೆ, ಇದನ್ನು ಸರಿಪಡಿಸಿ ಎಂದು ನಾನು ಖಾಸಗಿಯಾಗಿಯೂ ತಿಳಿಸಿದ್ದೆ. ಆದರೆ ಇವತ್ತಿನ ದಿವಸ ಆ ವ್ಯವಸ್ಥೆಯನ್ನು ಸರಿಪಡಿಸುವುದಕ್ಕೆ ಸರ್ಕಾರ ಪ್ರಯತ್ನ ಮಾಡಿಲ್ಲ. ಏತಕ್ಕೆ ಈ ರೀತಿ ಮಾಡುತ್ತಾರೆಂದು ನನಗೆ ಗೊತ್ತಿಲ್ಲ. ಇದರಿಂದ ಕೋಟ್ಯಾಂತರ ರೂಪಾಯಿ ನಮ್ಮ ರಾಜ್ಯಕ್ಕೆ ನಷ್ಟವಾಗುತ್ತಿದೆ. ಟ್ಯಾಕ್ಸ್ ಅನಾಮತ್ತಾಗಿ ಬೇರೆ ರಾಜ್ಯಗಳಿಗೆ ಹೋಗುತ್ತಿದೆ. ಗೋವಾಕ್ಕೆ ಪಾಂಡಿಚೆರಿಗೆ ಹೋಗುತ್ತದೆ. ಅಲ್ಲದೆ ಮೋಟಾರ್ ಬಿಡಿ ಭಾಗಗಳಲ್ಲೂ ಸಹ ತಮಿಳ್ನಾಡಿಗೂ, ನಮಗೂ ವ್ಯತ್ಯಾಸ ಇದೆ. ಬೆಂಗಳೂರಿನಲ್ಲಿರತಕ್ಕ ಅನೇಕರು ಹೊಸೂರಿಗೆ ಹೋಗಿ ಬಿಡಿ ಭಾಗಗಳನ್ನು ತರುತ್ತಾರೆ. ನಮ್ಮಲ್ಲಿ ಬಿಡಿಭಾಗಗಳಿಗೆ ಹೆಚ್ಚಿಗೆ ಟ್ಯಾಕ್ಸ್ ಇದೆ, ಅದೇ ತಮಿಳ್ನಾಡಿನಲ್ಲಿ ಕಡಿಮೆ ಇದೆ. ಇದರಿಂದ ನಮಗೆ ಬರಬೇಕಾಗಿರತಕ್ಕ ಟ್ಯಾಕ್ಸ್ ಹೋಗುತ್ತಿದೆ. ನಮ್ಮ ರಾಜ್ಯಕ್ಕೆ ನಷ್ಟವಾಗುತ್ತಿದೆ. ಇದನ್ನು ಸರಿಪಡಿಸಿ ಕೊನೇಪಕ್ಷ ಅವರಿಗೂ ನಮಗೂ ಬಹಳ ವ್ಯತ್ಯಾಸ ಏನಿದೆ, ಆ ವ್ಯತ್ಯಾಸದ ಅಂತರವನ್ನಾದರೂ ಕಡಿಮೆ ಮಾಡಿ, ಅದರಿಂದ ನಮ್ಮ ರಾಜ್ಯಕ್ಕೆ ಹೆಚ್ಚಿನ ಆದಾಯ ಬರುತ್ತದೆಂದು ಹೇಳಿದೆ. ಯಾರು ಮುಖ್ಯ ಮಂತ್ರಿಗಳಿಗೆ ಅಡ್ವೈಸ್ ಮಾಡುತ್ತಾರೋ, ಅವರು ಯಾರ ಮಾತು ಕೇಳುತ್ತಾರೋ ಗೊತ್ತಿಲ್ಲ. ಅವರು ಇದು ಯಾವುದನ್ನೂ ಕೂಡ ಇಂಪ್ಲಿಮೆಂಟ್ ಮಾಡುವುದಕ್ಕೆ ಪ್ರಯತ್ನ ಮಾಡಿಲ್ಲ.

ಶ್ರೀ ಎಸ್.ಬಂಗಾರಪ್ಪ:- ನಾನು ಯಾರ ಮಾತೂ ಕೇಳುವುದಿಲ್ಲ,ಹೇಳಿ.

ಶ್ರೀ ಸಿ.ಬೈರೇಗೌಡ:- ಯಾರೇ ಹೇಳಲಿ, ಒಳ್ಳೆಯದು ಹೇಳಿದರೆ ನೀವು ಕೇಳಬೇಕು. ಇವತ್ತು ನೀವು ಲೆಕ್ಕ ತರಿಸಿ. ನಾನು ಒಳ್ಳೆಯದನ್ನು ಹೇಳುತ್ತಿದ್ದೇನೆ, ರಾಜ್ಯದ ಹಿತದೃಷ್ಟಿಯಿಂದ ಹೇಳುತ್ತಿದ್ದೇನೆ. ಒಳ್ಳೆಯದು ಯಾರಿಂದ ಬಂದರೂ ಆ ಮಾತನ್ನು ತಾವು ಕೇಳಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ಸಾರಿಗೆ ಸಚಿವರು ಇಲ್ಲೇ ಇದ್ದಾರೆ. ಅವರ ಇಲಾಖೆಯಿಂದ ಮಾಹಿತಿ ತರಿಸಿ. ಎಷ್ಟು ವಾಹನಗಳು ಬೇರೆ ಕಡೆಯಿಂದ ಖರೀದಿಯಾಗಿದೆ ಎಂದು ನೋಡಿ. ನಾನು ಬೇರೆ ಉದಾಹರಣೆ ಕೊಡುವುದಕ್ಕೆ ಹೋಗುವುದಿಲ್ಲ. ನನ್ನ ಒಂದು ಉದಾಹರಣೆಯನ್ನೇ ಹೇಳುತ್ತಿದ್ದೇನೆ. ನಾನು ಕಾರು ತರಿಸಬೇಕಾದರೆ, ಪಾಂಡಿಚೆರಿಯಿಂದ ಕಾರು ತಂದರೂ ಎಲ್ಲಾ ವ್ಯವಹಾರ ಬೆಂಗಳೂರಿನಲ್ಲೇ ನಡೆಯಿತು. ಯಾರೂ ಕೂಡ ಪಾಂಡಿಚೆರಿಗೆ, ಗೋವಾಕ್ಕೆ ಹೋಗುವುದಿಲ್ಲ. ಎಲ್ಲ ವ್ಯವಹಾರ ಬೆಂಗಳೂರಿನಲ್ಲೇ ನಡೆಯುತ್ತದೆ. ಇದರಿಂದ ನಮ್ಮ ರಾಜ್ಯಕ್ಕೆ ನಷ್ಟವಾಗುತ್ತದೆ. ಇವತ್ತಿನ ದಿವಸ ಸಾರಿಗೆ ಇಲಾಖೆಯಿಂದ ಎಷ್ಟು ಗಾಡಿಗಳು ಬೇರೆ

ಕಡೆಯಿಂದ ಖರೀದಿಯಾಗಿವೆ ? ಅದರಿಂದ ಎಷ್ಟು ಟ್ಯಾಕ್ಸ್ ಬೇರೆ ಕಡೆ ಹೋಗಿದೆ ಎಂದು ಲೆಕ್ಕ ತರಿಸಿ ನೋಡಿದರೆ ಗೊತ್ತಾಗುತ್ತದೆ.

ಶ್ರೀ ಅಜೀಜ್ ಸೇಟ್:- ಸಾರಿಗೆ ಇಲಾಖೆಯವರು ಪಾಂಡಿಚೆರಿ, ಗೋವಾದಿಂದ ಏನು ಖರೀದಿ ಮಾಡಿಲ್ಲ.

ಶ್ರೀ ಸಿ.ಬೈರೇಗೌಡ:- ಎಷ್ಟು ವಾಹನಗಳು ಹೊರಗಡೆಯಿಂದ ಖರೀದಿಯಾಗಿವೆ ಎನ್ನುವುದನ್ನು ತರಿಸಿ ನೋಡಿದರೆ ಲೆಕ್ಕ ಸಿಗುತ್ತದೆ. ರಿಜಿಸ್ಟ್ರೇಷನ್ ಸರ್ಟಿಫಿಕೇಟ್ ಕೊಡುವಾಗ ಎಲ್ಲಿ ಖರೀದಿಸಿದ್ದೆಂದು ದಾಖಲೆ ಕೊಡಬೇಕಾಗುತ್ತದೆ. ಇದರಿಂದ ಎಷ್ಟು ಟ್ಯಾಕ್ಸ್ ಹೋಗುತ್ತಿದೆ ಎಂದು ಲೆಕ್ಕ ಸಿಗುತ್ತದೆ. ದಯವಿಟ್ಟು ಲೆಕ್ಕ ತರಿಸಿ ಎಂದರೆ ಮೊಂಡಾಟವಾಡುತ್ತಿದ್ದಾರೆ. ನಮ್ಮ ರಾಜ್ಯದ ಹಿತದೃಷ್ಟಿಯಿಂದ ಹೇಳಿದರೂ ಅದನ್ನು ಗಮನಿಸದೆ ಇರತಕ್ಕ ರೀತಿಯಲ್ಲಿ ಸರ್ಕಾರ ನಡೆಸಿದರೆ ಇದಕ್ಕೆ ನಾವು ಏನು ಹೇಳಬೇಕು. ಇದನ್ನು ಬೇರೆ ರಾಜ್ಯಗಳಿಗಿಂತ ಕಡಿಮೆ ಇಡಿ ಎಂದು ನಾನು ಹೇಳುವುದಿಲ್ಲ. ವಾಹನವನ್ನು ಅಲ್ಲಿಂದ ತರಿಸಿದರೆ ಅನ್‌ಎಕನಾಮಿಕಲ್ ಆಗುವಂತಾದರೂ ಮಾಡಿ ಎನ್ನುವುದು ನನ್ನ ಸಲಹೆ ದಯವಿಟ್ಟು ಇದನ್ನು ಮಾನ್ಯ ಮುಖ್ಯ ಮಂತ್ರಿಗಳು ಒಪ್ಪಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದಕ್ಕೆ ಇನ್ನೊಂದು ಉದಾಹರಣೆ ಕೊಡುತ್ತೇನೆ. ಬಂಗಾರದ ನಗ ನಾಣ್ಯಗಳ ಮೇಲೆ ಇರತಕ್ಕ ಟ್ಯಾಕ್ಸ್ ಕಡಿಮೆ ಮಾಡಿಗ್ದಾರೆ. ಅದಕ್ಕೆ ಮುಖ್ಯ ಮಂತ್ರಿಗಳು ಕೊಟ್ಟ ಉದಾಹರಣೆ ಏನೆಂದರೆ ,ಅದು ಬೇರೆ ಕಡೆ ಹೊರಟು ಹೋಗುತ್ತದೆಂದು ಕೇಂದ್ರ ಸರ್ಕಾರ ನೀತಿ ಅದು, ಅದರ ಪ್ರಕಾರ ನಮ್ಮ ರಾಜ್ಯದಲ್ಲಿ ಕಾರ್ಯಗತ ಮಾಡಿದ್ದೇವೆಂದು ಹೇಳಿದ್ದಾರೆ, ಅದು ಸ್ವಾಗತಾರ್ಹ. ಅದೇರೀತಿ ಮೋಟಾರ್ ವಾಹನಗಳ ಮೇಲೆ ಏತಕ್ಕೆ ಟ್ಯಾಕ್ಸ್ ಕಡಿಮೆ ಮಾಡುತ್ತಿಲ್ಲವೆಂದು ಅವರು ಹೇಳಿರತಕ್ಕ ಉದಾಹರಣೆಯಿಂದ ಅವರಿಗೆ ಈ ಪ್ರಶ್ನೆ ಕೇಳುವುದಕ್ಕೆ ಇಷ್ಟಪಡುತ್ತೇನೆ. ದಯವಿಟ್ಟು ಇದನ್ನು ಕೈ ಬಿಡಬೇಕು. ಬೇರೆ ರಾಜ್ಯಗಳಿಗೂ ನಮ್ಮ ರಾಜ್ಯಕ್ಕೂ ಬಹಳ ಅಂತರ ಇರತಕ್ಕದ್ದನ್ನು ಕಡಿಮೆ ಮಾಡಿ ಎಂದು ಮತ್ತೊಂದು ಸಾರಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಆಮೇಲೆ ಪ್ಲಾಸ್ಟಿಕ್‌ಗೆ ತೆರಿಗೆಯನ್ನು ಕಡಿಮೆ ಮಾಡಿದ್ದಾರೆ. ನಾನು ಅದನ್ನು ಸ್ವಾಗತ ಮಾಡುತ್ತೇನೆ. ಆದರೆ ಇವತ್ತು ಏನಾಗುತ್ತದೆಂದರೆ, ಪ್ಲಾಸ್ಟಿಕ್ ಎಂದರೆ ಸ್ಕ್ಯಾಪ್‌ಗೆ ಕೊಟ್ಬಿದ್ದಾರೆ. ಅದನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ ಇವತ್ತು ವ್ಯವಸಾಯ ರಂಗದಲ್ಲಿ ಪ್ಲಾಸ್ಟಿಕ್ ವಿಪರೀತ ಉಪಯೋಗವಾಗುತ್ತಿದೆ. ಪಿ.ವಿ.ಸಿ. ಪೈಪ್ ಪ್ಲಾಸ್ಟಿಕ್‌ನಿಂದ ಬರುತ್ತಿದೆ. ಅಷ್ಟೇ ಅಲ್ಲದೆ, ನಮ್ಮಂಥ ಜಿಲ್ಲೆಗಳಲ್ಲಿ ಡ್ರಿಪ್ ಇರಿಗೇಷನ್ ಮಾಡುತ್ತಿದ್ದೇವೆ. ನಿಮ್ಮ ಕೊಡಗು ಜಿಲ್ಲೆಯಲ್ಲಿ ಸ್ಪಿಂಕ್‌ಲರ್ ಉಪಯೋಗಿಸುತ್ತಿದ್ದಾರೆ. ಅದಕ್ಕೆ ಪ್ಲಾಸ್ಟಿಕ್ ಬೇಕಾಗಿಲ್ಲ. ಆದರೆ ಡ್ರಿಪ್ ಇರಿಗೇಷನ್‌ಗೆ ಭೂಮಿ ಒಳಗೆ ಉಪಯೋಗಿಸುವ ಪಿ.ವಿ.ಸಿ. ಪೈಪ್ ಪ್ಲಾಸ್ಟಿಕ್‌ನಿಂದ ತಯಾರಿಸತಕ್ಕದ್ದು, ಅಷ್ಟೆ ಅಲ್ಲದೆ ಡ್ರಿಪ್ ಇರಿಗೇಷನ್‌ನಲ್ಲಿ ಉಪಯೋಗಿಸುವ ಪ್ರತಿಯೊಂದು ಭಾಗವೂ ಕೂಡ , ಬಿಡಿ ಭಾಗಗಳು ಪ್ಲಾಸ್ಟಿಕ್‌ನಿಂದ ಮಾಡಿರುವುದು. ಇವತ್ತು ನಮ್ಮಂಥ ಬರಡು ಜಿಲ್ಲೆಗಳ ನೀರಾವರಿಗೆ ಯಥೇಚ್ಚವಾಗಿ ಕೇಂದ್ರ ಸರ್ಕಾರದಿಂದ ಸಬ್ಸಿಡಿ ಕೊಡುತ್ತಿದ್ದಾರೆ. ಅದನ್ನು ನಾವು ಸ್ವಾಗತ ಮಾಡುತ್ತೇವೆ. ಆದರೆ ಏನಾಗಿದೆಯೆಂದರೆ, ಒಂದು ಕಡೆ ಪ್ಲಾಸ್ಟಿಕ್‌ಗೆ ಇರತಕ್ಕ ಸುಂಕ ತೆಗೆದು ಮತ್ತೊಂದು ಕಡೆ ಎಂಟ್ರಿ ಟ್ಯಾಕ್ಸ್ ಹಾಕಿದ್ದಾರೆ ಇದರಿಂದ ರೈತರಿಗೆ ಏನೂ ಪ್ರಯೋಜನವಿಲ್ಲ ಎಂಟ್ರಿ ಟ್ಯಾಕ್ಸ್ ಬೇರೆ ಯಾವುದಕ್ಕೆ ಬೇಕಾದರೂ ಹಾಕಿ. ಆದರೆ ರೈತರಿಗೆ ಅನಾನುಕೂಲವಾಗತಕ್ಕ, ರೈತರು ಬಳಕೆ ಮಾಡತಕ್ಕ ವಸ್ತುಗಳಿಗೆ ಬೇಡ. ಪ್ಲಾಸ್ಟಿಕ್ ಇಲ್ಲದೆ ವ್ಯವಸಾಯ ಇಲ್ಲ. ಬೋರ್‌ವೆಲ್ ಹಾಕಿದರೆ ಒಂದು ಕಿಲೋಮೀಟರ್ ಎರಡು ಕಿಲೋಮೀಟರ್ ದೂರ ನೀರನ್ನು

ತೆಗೆದುಕೊಂಡು ಹೋಗಬೇಕಾಗುತ್ತದೆ. ಒಂದು ಎಕರೆಗೆ ನಾವು ಡ್ರಿಪ್ ಇರಿಗೇಷನ್ ಮಾಡಬೇಕಾದರೆ 8 ರಿಂದ 10 ಸಾವಿರ ರೂಪಾಯಿವರೆಗೂ ಖರ್ಚು ಮಾಡಬೇಕಾಗುತ್ತದೆ. ಆದ್ದರಿಂದ ಸಾಮಾನ್ಯ ರೈತರು ಇವತ್ತಿನ ದಿವಸ. ಡ್ರಿಪ್ ಇರಿಗೇಷನ್ ಮಾಡಿ ಅದರ ಮೂಲಕ ಇಳುವರಿ ಹೆಚ್ಚು ಮಾಡಿಕೊಳ್ಳತಕ್ಕ ಪ್ರಯತ್ನ ನಡೆಯುತ್ತಿದೆ. ಮತ್ತು ಇದು ಅತೀ ಆಧುನಿಕವಾದ ನೀರಾವರಿ ವಿಧಾನವೂ ಹೌದು. ದಯವಿಟ್ಟು ಮಾನ್ಯ ಮುಖ್ಯಮಂತ್ರಿಗಳು ಈ ಕಡೆ ಗಮನ ಹರಿಸಬೇಕು. ಡ್ರಿಪ್ ಇರಿಗೇಷನ್‌ಗೆ ಮತ್ತು ನೀರಾವರಿಗೆ ಬಳಕೆಯಾಗುತ್ತಾ ಇರುವ ಪ್ಲಾಸ್ಟಿಕ್‌ಗೆ ಎಂಟ್ರಿ ಟ್ಯಾಕ್ಸ್ ಏನಿದೆ ಅದನ್ನು ದಯವಿಟ್ಟು ಕಡಿಮೆ ಮಾಡಿ. ಇದರಿಂದ ನೀರಾವರಿಗೆ ಅದೂ ಆಧುನಿಕವಾದ ಡ್ರಿಪ್ ಇರಿಗೆಷನ್‌ಗೆ ಎನ್‌ಕರೇಜ್‌ಮೆಂಟ್ ಕೊಟ್ಟಂತಾಗುತ್ತದೆ. ರೈತರಿಗೆ ಸಬ್ಸಿಡಿ ಏನು ಕೊಡುತ್ತಿದ್ದಿರಿ ಅದರಿಂದ ಪ್ರಯೋಜನವಾಗುತ್ತದೆ ಒಂದು ಕಡೆ ರೈತರಿಗೆ ಸಬ್ಸಿಡಿ ಕೊಟ್ಟು, ಮತ್ತೊಂದು ಕಡೆ ಎಂಟ್ರಿ ಟ್ಯಾಕ್ಸ್ ಮತ್ತೊಂದು ಟ್ಯಾಕ್ಸ್ ಏರಿಸಿ, ಅದರ ಮೂಲಕ ರೈತರಿಂದ ಕಿತ್ತುಕೊಳ್ಳುವ ಪ್ರಯತ್ನ ಏನು ನಡೆಯುತ್ತಿದೆ ಅದು ಬೇಡ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಬೇರೆ ಎಲ್ಲ ವಿಷಯಗಳನ್ನೂ ಪ್ರಸ್ತಾಪ ಮಾಡುವುದಿಲ್ಲ. ಬಹಳ ವೈಟಲ್ ಆಗಿರತಕ್ಕ, ಅತೀ ಪ್ರಮುಖವಾಗಿರತಕ್ಕ ವಿಚಾರಗಳನ್ನು ಮಾತ್ರ ನಾನು ಪ್ರಸ್ತಾಪ ಮಾಡಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಭರವಸೆ ಕೊಡಬೇಕು. ಇದನ್ನು ಕೈಬಿಡುತ್ತೇವೆ ಮೋಟಾರ್ ವೆಹಿಕಲ್ಸ್ ಮೇಲೆ ಇರತಕ್ಕ ಟ್ಯಾಕ್ಸ್ ಕಡಿಮೆ ಮಾಡುತ್ತೇನೆ, ಪ್ಲಾಸ್ಟಿಕ್ ಸಾಮಾನುಗಳು ಇದರಲ್ಲೂ ವ್ಯವಸಾಯದಲ್ಲಿ ಉಪಯೋಗವಾಗುತ್ತಿರುವ ಪ್ಲಾಸ್ಟಿಕ್ ಸಾಮಾನುಗಳು ಏನಿವೆ ಪೈಪ್ ಆಗಲೀ, ಡ್ರಿಪ್ ಇರಿಗೇಷನ್‌ಗೆ ಉಪಯೋಗಿಸುವ ಪ್ಲಾಸ್ಟಿಕ್ ಆಗಲೀ ಅವನ್ನು ಎಲ್ಲಾ ಸುಂಕಗಳಿಂದ ಮುಕ್ತ ಮಾಡುತ್ತೇವೆ ಎಂಬ ಭರವಸೆಯನ್ನು ದಯವಿಟ್ಟು ಮಾನ್ಯ ಮುಖ್ಯಮಂತ್ರಿಗಳು ಕೊಡಬೇಕೆಂದು ವಿನಂತಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್.ಬಂಗಾರಪ್ಪ: (ಮುಖ್ಯಮಂತ್ರಿಯವರು):- ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಬೈರೇಗೌಡರು ಹೇಳಿರತಕ್ಕ ವಿಚಾರದಲ್ಲಿ ಸ್ವಲ್ಪ ಅರ್ಥ ಇದೆ. ನಾನು ಅದಕ್ಕಾಗಿ ಈಗ ಸಾರಿಗೆ ಸಚಿವ ಮಿತ್ರರ ಹತ್ತಿರ ಮಾತನಾಡಿದ್ದೇನೆ. ಹಿಂದೆ ಕೂಡ ಈ ವಿಚಾರ ಪ್ರಸ್ತಾವಕ್ಕೆ ಬಂದಿದೆ. Tax on Motor Cars ಏನಿದೆ Karnataka is on par with the rates in the neighbouring States, except in Goa and Pondicherry. ಉಳಿದ ಕಡೆ ಸರಿ ಇದೆ. ಕರ್ನಾಟಕದಲ್ಲಿ 6 ಪರ್ಸೆಂಟ್ ಇದೆ. ತಮಿಳುನಾಡು 5.75 ಪರ್ಸೆಂಟ್ ಅಂದರೆ ಹತ್ತಿರಹತ್ತಿರ 6 ಪರ್ಸೆಂಟ್ ಇದೆ. ಕೇರಳ 5-20 ಪರ್ಸೆಂಟ್ ಇದೆ. ಆಂಧ್ರಪ್ರದೇಶ 5.50 ಪರ್ಸೆಂಟ್, ಮಹಾರಾಷ್ಟ್ರ 12.44 ಪರ್ಸೆಂಟ್ ಇದೆ. Manufacturers have opened depots in Goa and Pondicherry andsell cars on their own without selling through Distributors. Steps are being taken to impose Entry Tax on Cars brought from other States. ನಾವು ಈಗ ಏನು ಮಾಡುತ್ತೇವೆಂದರೆ ಎಂಟ್ರಿ ಟ್ಯಾಕ್ಸ್ ಹಾಕಿಬಿಟ್ಟಿರೆ ಅದು ಮಾಡುವುದಕ್ಕೆ ಅನುಕೂಲವಾಗುತ್ತದೆ. But there is trade level diversion ನೀವು ಎಂಟ್ರಿ ಟ್ಯಾಕ್ಸ್ ವಿಚಾರ ಮಾತನಾಡಿದ್ದೀರಿ. ಮೋಟಾರ್ ಕಾರ್ಸ್ ವಿಚಾರದಲ್ಲಿ ನಾನು ಹೇಳತಕ್ಕದ್ದು. ನಾನು ಒಂದು ಏನು ಮಾಡಿದ್ದೇನೆಂದರೆ ಮಾನ್ಯ ಸಾರಿಗೆ ಸಚಿವರಿಗೂ ಕೂಡ ನಾನು ಹೇಳಿದ್ದೇನೆ. ಫೈನಾನ್ಸ್ ಡಿಪಾರ್ಟ್‌ಮೆಂಟ್, ಟ್ರಾನ್ಸ್‌ಪೋರ್ಟ್ ಡಿಪಾರ್ಟ್‌ಮೆಂಟ್ ನಾವೆಲ್ಲ ಕುಳಿತು ಒಂದು ಸಾರಿ ಒಂದು ಮೀಟಿಂಗ್ ಕೂಡ

ಮಾಡಿ the points that you have suggested included those points and other points that may crop up for discussion and requires certain decisions tobe taken up thereon. .. .ಅದರ ಬಗ್ಗೆ ನಾವು ಕುಳಿತು ಚರ್ಚೆ ಮಾಡುವುದಕ್ಕೆ ಕೂಡ ವಿಚಾರ ಮಾಡಿ ಒಂದು ಅಂತಿಮ ತೀರ್ಮಾನಕ್ಕೆ ಬರುತ್ತೇವೆ.

+ ಶ್ರೀ ಬಿ.ಎಸ್.ಯಡಿಯೂರಪ್ಪ:- ತಾವು ಏನು ಮಾರಾಟ ತೆರಿಗೆ ವಿಧೇಯಕಕ್ಕೆ ತಿದ್ದುಪಡಿಯನ್ನು ತರುತ್ತಿದ್ದೀರಿ, ಇದರಲ್ಲಿ ಮಾನ್ಯ ಭೈರೇಗೌಡರು ಪ್ರಸ್ತಾಪ ಮಾಡುವ ಸಂದರ್ಭದಲ್ಲಿ ವೆಹಿಕಲ್ಸ್ ಬಗ್ಗೆ ಪ್ರಸ್ತಾಪ ಮಾಡುತ್ತಾ ಹೇಳಿದರು. ಇವತ್ತು ಇಡೀ ದೇಶದಲ್ಲಿ ವಿಶೇಷವಾಗಿ ಪಕ್ಕದ ರಾಜ್ಯಗಳಲ್ಲಿ, ಅದು ಆಂಧ್ರ ಇರಬಹುದು, ಕೇರಳ ಇರಬಹುದು, ತಮಿಳುನಾಡು ಇರಬಹುದು. ಅಲ್ಲಿ ಮೊದಲೆ ನಮ್ಮ ರಾಜ್ಯಕ್ಕಿಂತ ಕಡಿಮೆ ಇತ್ತು ನಮ್ಮಲ್ಲಿ ಜಾಸ್ತಿ ಇತ್ತು. ಈಗ ಮತ್ತೆ ಈಗ ಜಾಸ್ತಿ ಮಾಡುವುದಕ್ಕೆ ಹೊರಟಿದ್ದೀರಿ. ಇದರ ಪರಿಣಾಮ ಏನಾಗುತ್ತದೆ ? ಎಂದರೆ, ಇವತ್ತು ಆ ರಾಜ್ಯಗಳಲ್ಲಿ ರಿಜಿಸ್ಟ್ರೇಷನ್ ಮಾಡಿಕೊಂಡು ಬಂದು ಇಲ್ಲಿ ವೆಹಿಕಲ್ಸ್ ಓಡಾಡಿಸಲುತ್ತಿದ್ದಾರೆ. ಉದಾಹರಣೆಗೆ ಮೆಟಡರ್ ವ್ಯಾನ್‌ಗೆ ನಮ್ಮದು ಬ್ಲಾಕ್ ಬೋರ್ಡ್ ಏನು ಇತ್ತು ಅದಕ್ಕೆ ಜಾಸ್ತಿ ಟ್ಯಾಕ್ಸ್ ಇದೆ. ಆದರೆ ವೈಟ್ ಬೋರ್ಡ್‌ಗೆ ಇವತ್ತು ಕಡಿಮೆ ಇದೆ. ಸೀಟ್ ಮೇಲೆ ಮೊದಲು ಕೊಡುತ್ತಿದ್ದೆವು.

ಶ್ರೀ ಅಜೀಜ್ ಸೇಟ್:- ಭೈರೇಗೌಡರು ಹೇಳುತ್ತಿದ್ದುದು ಸೇಲ್ಸ್ ಟ್ಯಾಕ್ಸ್ ವಿಚಾರ. Sales Tax andPurchase of Vehicles, chassis, cars, lorries, buses. ತಾವು ಹೇಳುತ್ತಾ ಇರುವುದು, ಮೋಟಾರ್ ವೆಹಿಕಲ್ ಟ್ಯಾಕ್ಸ್ ವಿಚಾರ. For that a Bill is going to be introduced by me now. ಅದು ಬೇರೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಸೇಲ್ಸ್ ಟ್ಯಾಕ್ಸ್ ಬಗ್ಗೆ ಕೂಡ ಹಿಂದೆ ತಮಗೆ ಗೊತ್ತಿರುವ ಹಾಗೆ ಮಾನ್ಯ ರಾಜಶೇಖರಮೂರ್ತಿಯವರು ಹಣಕಾಸಿನ ಸಚಿವರಾಗಿದ್ದಾಗ ಪಕ್ಕದ ರಾಜ್ಯಗಳಲ್ಲಿ ಎಷ್ಟು ಇದೆ, ನಮ್ಮ ರಾಜ್ಯದಲ್ಲಿ ಎಷ್ಟು ಇದೆ ಎಂಬ ಬಗ್ಗೆ ನಾವು ಒಟ್ಟಾಗಿ ಕುಳಿತು ಯೋಚನೆ ಮಾಡಿ, ಚರ್ಚೆ ಮಾಡಿ ಲಾಸ್ ಆಗದಹಾಗೆ ಮಾಡುತ್ತೇವೆ ಎಂದು ಹೇಳಿದ್ದರು. ಈ ಬಗ್ಗೆ ಸುದೀರ್ಘವಾಗಿ ಸುಮಾರು 2-3 ಗಂಟೆ ಚರ್ಚೆ ಆಯಿತು. ಟ್ಯಾಕ್ಸ್ ಜಾಸ್ತಿ ಮಾಡಿದರೆ ಸರ್ಕಾರಕ್ಕೆ ಹೆಚ್ಚು ಆದಾಯ ಬರುತ್ತದೆ ಎಂದು ತಾವು ಅಂದುಕೊಂಡಿದ್ದರೂ ವಾಸ್ತವಿಕವಾಗಿ ಹಾಗೆ ಆಗುತ್ತಾ ಇಲ್ಲ. ಪಕ್ಕದ ರಾಜ್ಯದಲ್ಲಿ ಟ್ಯಾಕ್ಸ್ ಕಡಿಮೆ ಇರುವುದರಿಂದ ಅಲ್ಲಿಗೆ ಹೋಗುತ್ತಿದ್ದಾರೆ. ಇದರಿಂದ ನಮ್ಮ ರಾಜ್ಯಕ್ಕೆ ಲಾಭ ಬರುತ್ತಾ ಇಲ್ಲ. ಈ ಹಿನ್ನೆಲೆಯಲ್ಲಿ ಬೇರೆ ರಾಜ್ಯದಲ್ಲಿ ಏನು ಇದೆ ಅದನ್ನು ಕಂಪೇರ್ ಮಾಡಿ ಸರ್ಕಾರದ ಬೊಕ್ಕಸಕ್ಕೆ ಹೊಡೆತ ಆಗದಹಾಗೆ ಮರು ಪರಿಶೀಲನೆ ಮಾಡಿ ಎಂದು ಹೇಳುತ್ತೇನೆ. ಬೇರೆ ಬೇರೆ ರಾಜ್ಯಗಳಲ್ಲಿ ಎಷ್ಟು ಇದೆ ಎಂದು ನಮಗೆ ಕಂಪ್ಯಾರಿಟೀವ್ ಸ್ಟೇಟ್‌ಮೆಂಟ್ ಕೊಟ್ಟರೆ ನಮಗೂ ಸ್ಪಷ್ಟವಾಗುತ್ತದೆ. ಈ ಹಿನ್ನೆಲೆಯಲ್ಲಿ ಸೇಲ್ಸ್‌ಟ್ಯಾಕ್ಸ್‌ಗೆ ಹೊಡೆತವಾಗುವುದರಿಂದ ಪುನರ್ ಪರಿಶೀಲನೆ ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಶ್ರೀ ಸಿ.ಭೈರೇಗೌಡ:- ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾ, ಮೋಟರ್‌ವೆಹಿಕಲ್ ಹಾಗೂ ಕಮರ್ಶಿಯಲ್ ಟ್ಯಾಕ್ಸ್ ಡಿಪಾರ್ಟ್‌ಮೆಂಟ್ ಜೊತೆ ಸಭೆ ಮಾಡುತ್ತೇವೆ ಎಂದು ಹೇಳಿದ್ದಾರೆ. ಇದೇ ಉತ್ತರವನ್ನು ಎರಡು ಸಾರಿ ಈ ಸದನದಲ್ಲಿ ನಾನು ಕೇಳಿದ್ದೇನೆ. ತಾವೂ ಕೂಡ ಇದೇ ಉತ್ತರವನ್ನು ಹೋದಸಾರಿ ಹೇಳಿದ್ದೀರಿ. ಹಿಂದೆ ಆರ್ಥಿಕ ಸಚಿವರಾಗಿದ್ದ ಮಾನ್ಯ ರಾಜಶೇಖರ ಮೂರ್ತಿಯವರೂ ಹೇಳಿದ್ದಾರೆ. ಈರೀತಿ ಉತ್ತರ ಹೇಳುತ್ತಾ, ಹೇಳುತ್ತಾ ನಮ್ಮ ರಾಜ್ಯಕ್ಕೆ

ಬರಬೇಕಾಗಿರತಕ್ಕ ಕೋಟ್ಯಾಂತರ ರೂಪಾಯಿ ಬೇರೆ ಕಡೆ ಹೋಗುತ್ತಿದೆ. ತಾವು ಎಂಟ್ರಿಟ್ಯಾಕ್ಸ್ ಹಾಕೋಣ ಎಂದು ಹೇಳುತ್ತಿದ್ದೀರಿ. ಆದರೆ ಅದನ್ನೂ ಕೂಡ ಅವಾಯ್ಡ್ ಮಾಡುವುದಕ್ಕೆ ಸಾಧ್ಯ ಇದೆ. ಹೇಗೆಂದರೆ, ಪಾಂಡಿಚೆರಿಯಲ್ಲಿ ಒಂದು ಅಡ್ರೆಸ್ ಕೊಟ್ಟು ಅಲ್ಲಿ ರಿಜಿಸ್ಟರ್ ಆಗುತ್ತದೆ. ಇಲ್ಲಿ ಆ ಗಾಡಿಗಳು ಓಡಾಡುತ್ತವೆ. ಈ ದೇಶದಲ್ಲಿ ಟ್ರಾನ್ಸ್‌ಫರ್ ಆಫ್ ಓನರ್‌ಶಿಪ್‌ಎಲ್ಲಿಗೆ ಬೇಕಾದರೂ ಟ್ರಾನ್ಸ್‌ಫರ್ ಮಾಡಿಕೊಳ್ಳುವ ಸಾಧ್ಯತೆ ಇರುವುದರಿಂದ 2-3 ವರ್ಷಗಳಾದಮೇಲೆ ಟ್ರಾನ್ಸ್‌ಫರ್ ಮಾಡಿಸಿಕೊಳ್ಳುತ್ತಾರೆ. ಅದಕ್ಕೋಸ್ಕರ ಈ ಸುತ್ತು ಬಳಸು ಮಾಡುವ ವ್ಯವಹಾರ ಬೇಡ. ಹೊರ ರಾಜ್ಯಗಳಿಗಿಂತಲೂ ನಮ್ಮದು ಟ್ಯಾಕ್ಸ್ ಕಡಿಮೆ ಇದ್ದರೆ ಆ ರಾಜ್ಯದವರು ನಮ್ಮಲ್ಲಿಗೆ ಬರುತ್ತಾರೆ. ಆಗ ನಮ್ಮ ರಾಜ್ಯಕ್ಕೂ ಹಣ ಬರುತ್ತದೆ. ಆದ್ದರಿಂದ ಸುತ್ತುಬಳಸುವ ವ್ಯವಹಾರ ಬೇಡ. ದಯಮಾಡಿ ಇದನ್ನು ವಾಪಸ್ಸು ತೆಗೆದುಕೊಳ್ಳಿ. ಇದಕ್ಕೆ ಅಫಿಶಿಯಲ್ಲಾಗಿ ಅಮೆಂಡ್‌ಮೆಂಟ್ ಈಗಲೇ ತನ್ನಿ. ಈಗ ಇಲ್ಲದಿದ್ದರೆ ನಾಳೆ ತೆಗೆದುಕೊಂಡು ಬನ್ನಿ. ಈ ಬಿಲ್ ವಾಪಸ್ಸು ಪಡೆದು ನಾಳೆ ಅಧಿಕೃತವಾಗಿ ತಿದ್ದುಪಡಿತಂದು ಮಾಡಬಹುದು. ಇದರಿಂದ ನಷ್ಟವಾಗುತ್ತಿದೆ, ತೊಂದರೆ ಆಗುತ್ತಿದೆ ಎಂಬುದನ್ನು ತಾವೂ ಒಪ್ಪಿದ್ದೀರಿ. ಆದ್ದರಿಂದ ತಾವು ತಿದ್ದುಪಡಿ ತಂದು ನಾಳೆ ನಾವು ಪರಿಶೀಲನೆ ಮಾಡುವುದಕ್ಕೆ ಅವಕಾಶಮಾಡಿಕೊಟ್ಟರೆ ನಮ್ಮ ರಾಜ್ಯದ ಬೊಕ್ಕಸಕ್ಕೆ ಹೆಚ್ಚಿನ ಹಣ ಬರುತ್ತದೆ. ಆದ್ದರಿಂದ ದಯಮಾಡಿ ಈ ಬಗ್ಗೆ ಆಲೋಚನೆ ಮಾಡಿ ಎಂದು ನಾನು ಮತ್ತೊಂದು ಸಾರಿ ತಮ್ಮಲ್ಲಿ ವಿನಂತಿಸುತ್ತೇನೆ.

ಶ್ರೀ ಎಸ್.ಬಂಗಾರಪ್ಪ:- ನೀವು ಸ್ವಲ್ಪ ಕನ್‌ಫ್ಯೂಸ್ ಮಾಡಿಕೊಂಡಿದ್ದೀರಿ. ನಮಗೂ ಕೂಡ ಕನ್‌ಫ್ಯೂಷನ್ ಮಾಡುವಹಾಗೆ ನೀವು ಮಾತನಾಡುವುದು ಬೇಡ. ಏಕೆಂದರೆ,ಈಗ ನಾವು ಮೋಟಾರ್ ಕಾರ್ಸ್ ಮೇಲೆ ಸೇಲ್ಸ್ ಟ್ಯಾಕ್ಸ್ ಏನು ಇದೆ ಅದನ್ನು ಜಾಸ್ತಿ ಮಾಡಿದರೆ ಮಾತ್ರ ಈ ಬಿಲ್ಲನ್ನು ಹಿಂದಕ್ಕೆ ತೆಗೆದುಕೊಳ್ಳುವ ಪ್ರಶ್ನೆ ಬರುತ್ತದೆ. We have not raised. We have not tried to put any more tax on the sale of cars. ಈ ಅಮೆಂಡ್‌ಮೆಂಟ್‌ನಲ್ಲಿ ಇಲ್ಲ. ನಾವು ಜಾಸ್ತಿ ಮಾಡಿದರೆ ತಾನೇ ಹಿಂದೆ ತೆಗೆದುಕೊಳ್ಳುವ ಪ್ರಶ್ನೆ ಬರುವುದು. ಇಷ್ಟಾದರೂ ಕೂಡ ನಿಮ್ಮ ಗಮನದಲ್ಲಿರಲಿ ಎಂದು ನಾನು ಓದಿ ಹೇಳಿದ್ದೇನೆ. ನೀವು ಹೇಳಿದಿರಲ್ಲ ಎಂದು ನಾನು ಹೇಳಿದೆ. That proposal is not at all before us. This amendment does not cover the sales tax on the sale of Motor Cars. ಇದರಲ್ಲಿ ಅದು ಬರುವುದಿಲ್ಲ. ಇದರಲ್ಲಿ ನಾವು ಜಾಸ್ತಿ ಮಾಡಿಲ್ಲ. ಆದರೂ ಕೂಡ ನೀವು ಪ್ರಸ್ತಾಪ ಮಾಡಿದ್ದೀರಿ ಎಂದು ತಮ್ಮ ಗಮನಕ್ಕೆ ತರಬೇಕಾದರೆ ನಾನು ಹೇಳಿದೆ. ಕರ್ನಾಟಕದಲ್ಲಿ 6 ಪರ್ಸೆಂಟ್ ಇದ್ದರೆ ತಮಿಳುನಾಡು, ಕೇರಳ, ಆಂಧ್ರಪ್ರದೇಶದಲ್ಲಿ ಕ್ರಮವಾಗಿ 5.7, 5.20 ಮತ್ತು 5.75 ಇತ್ಯಾದಿ ಇದೆ. ಮಹಾರಾಷ್ಟ್ರದಲ್ಲಿ 12.44 ಇದೆ. ಇದು ಸ್ವಲ್ಪ ತಮ್ಮ ಗಮನದಲ್ಲಿರಲಿ. ನಾನು ಸುಮ್ಮನೆ ಹೇಳಿದೆ. ಆದರೆ ಈ ಬಿಲ್‌ನಲ್ಲಿ ಅದು ಇಲ್ಲ. ಆದ್ದರಿಂದ ಹಿಂದಕ್ಕೆ ತೆಗೆದುಕೊಳ್ಳತಕ್ಕ ಪ್ರಶ್ನೆಯಿಲ್ಲ. ಈ ಬಿಲ್‌ನಲ್ಲಿ ಆ ವಿಚಾರ ಬಾರದೆ ಇದ್ದರೂ ಕೂಡ ನಾನು ಹೇಳಿದೆ. ಟ್ರೇಡ್ ಡೈವರ್ಷನ್ ಆ ಕಡೆಗೆ ಹೊರಟುಹೋಗುತ್ತದೆ. ಪಾಂಡಿಚೇರಿ, ಆ ಕಡೆಗೆ ಕಡಿಮೆಯಿದೆ ಎನ್ನತಕ್ಕ ಒಂದು ಅಭಿಪ್ರಾಯವಿದೆ. ಅದು ಇವತ್ತಿನದಲ್ಲ. ಬಹಳ ದಿನಗಳಿಂದ ಹಾಗೆಯೇ ಇರತಕ್ಕದ್ದು. ಇಷ್ಟಾದರೂ ಕೂಡ ಟ್ರಾನ್ಸ್‌ಪೋರ್ಟ್ ಡಿಪಾರ್ಟ್‌ಮೆಂಟ್‌ನವರು ಮತ್ತು ಫೈನಾನ್ಸ್ ಡಿಪಾರ್ಟ್‌ಮೆಂಟ್‌ನವರು ಸೇರಿ ಒಂದು ಮೀಟಿಂಗ್ ಮಾಡತ್ತೇವೆಂದು ಹೇಳಿದೆ. ಅದನ್ನು ಯಾವರೀತಿಯಾಗಿ ಚೆಕ್ ಮಾಡಬೇಕು, ಯಾವರೀತಿಯಾಗಿ ಇನ್‌ಕಂ ಜಾಸ್ತಿ ಬರುವಹಾಗೆ

ಮಾಡಬೇಕು, ರೆವಿನ್ಯೂ ಜಾಸ್ತಿ ಬರುವಹಾಗೆ ಮಾಡಬೇಕೆನ್ನುವ ಬಗ್ಗೆ ಒಂದು ಮೀಟಿಂಗ್ ಮಾಡುತ್ತೇವೆ ಎನ್ನುವ ಮಾತನ್ನು ಹೇಳಿದ್ದೆ. ಇದೇ ಉದ್ದೇಶದಿಂದ ಹೇಳಿದ್ದೆ. ಇಲ್ಲಿ ಏನಾಗಿದೆಯೆಂದರೆ, ತಡವಾಗಿ ಹೇಳುತ್ತಿದ್ದಾರೆನ್ನುವ ಮಾತನ್ನು ಹೇಳಿದ್ದಾರೆ. ನೀವು ಜನರಲ್ ಆಗಿ ಹೇಳಿದ್ದೀರಿ. ನಾನು ಸಹ ಜನರಲ್ ಆಗಿ ಮಾತನಾಡುತ್ತಿದ್ದೇನೆ. That point is not at all before us, in this amendment Bill. ನಾನು ಏತಕ್ಕೆ ಹೇಳಿದೆ ಅಂದರೆ, ಮಹಾರಾಷ್ಟ್ರದಲ್ಲಿ 12.44 ಇದೆ. ಸ್ವಲ್ಪ ವಿಚಾರ ಮಾಡಿ. ನಾವು ಎಷ್ಟೇ ಕಡಿಮೆ ಮಾಡಿದರೂ, ಪಾಂಡಿಚೇರಿ ನೋಡಿ ಮಾಡುವುದಕ್ಕೆ ಹೋಗುತ್ತೀರಿ, ಆದರೆ ಮಹಾರಾಷ್ಟ್ರ ನೋಡಿದಾಗ We are far below that of Maharashtra. ಅದಕ್ಕೆ ಏನು ಮಾಡಬೇಕು ? ಸದರನ್ ಸ್ಟೇಟ್ಸ್‌ನವರು ಎಲ್ಲ ಸೇರಿ, ಇನ್‌ಕ್ಲುಡಿಂಗ್ ಮಹಾರಾಷ್ಟ್ರವನ್ನು ನಾನು ಸದರನ್ ಸ್ಟೇಟ್ ಎಂದು ಕರೆಯದಿದ್ದರೂ ಕೂಡ ಎಲ್ಲರೂ ಕುಳಿತು ಕೊಂಡು ಒಂದು ಮೀಟಿಂಗ್ ಮಾಡಿದರೆ ಒಳ್ಳೆಯ ಉಪಯೋಗವಾಗುತ್ತದೆ. ಬರೀ ಅದು ಒಂದನ್ನೇ ಅಲ್ಲ. ಎಂಟ್ರೆರ್ ಸೇಲ್ಸ್ ಟ್ಯಾಕ್ಸ್ ಸ್ಟ್ರಕ್ಚರ್ ಏನು ಇದೆಯಲ್ಲ ಅದರ ಬಗ್ಗೆ ಸದರನ್ ಸ್ಟೇಟ್ಸ್‌ನವರೆಲ್ಲ ಸೇರಿಕೊಂಡು ಒಂದು ಮೀಟಿಂಗ್ ಮಾಡಿದಾಗ ಇದನ್ನೂ ಒಂದು ಸಬ್ಜಕ್ಟ್ ಮ್ಯಾಟರ್ ಇಟ್ಟುಕೊಂಡರೆ ಬಹಳ ಒಳ್ಳೆಯದು. ನಾನು ಆ ದೃಷ್ಟಿಯಿಂದ ಹೇಳಿದೆ. ಕೊನೆಯ ಪಕ್ಷ ನಾವು ಪಾಂಡಿಚೆರಿಯವರು ಎಲ್ಲರೂ ಮಾತನಾಡೋಣವೆಂದು ಅದಕ್ಕಾಗಿ ನಾನು ಸಲಹೆ ಮಾಡಿದ್ದು. ಇದನ್ನು ನಾವು ಗಮನಿಸುತ್ತೇವೆ. ನಾನು ಇಷ್ಟು ಮಾತ್ರ ಹೇಳಬಲ್ಲೆ. ಈಗಿರತಕ್ಕದ್ದನ್ನು ನೀವೆಲ್ಲ ಸ್ವಾಗತ ಮಾಡಿದ್ದೀರಿ. ಅದರ ಬಗ್ಗೆ ತೊಂದರೆಯಿಲ್ಲ. ಅನೇಕ ಐಟಂಗಳ ಮೇಲೆಕನ್ಸೀಷನ್ ಕೊಟ್ಟು ರೆಡ್ಯೂಸ್ ಮಾಡಿರತಕ್ಕದು ಮತ್ತು ತೆಗೆದುಹಾಕಿರತಕ್ಕದ್ದನ್ನು ನಾನು ಹೇಳಿದ್ದೇನೆ. ಇದರಿಂದ ರೈತವರ್ಗಕ್ಕೆ ಅನುಕೂಲವಾಗುತ್ತದೆ.

ಶ್ರೀ ಸಿ. ಭೈರೇಗೌಡ:- ಪ್ಲಾಸ್ಟಿಕ್ ಮೇಲೆ ಹೇಳಿ.

ಶ್ರೀ ಎಸ್.ಬಂಗಾರಪ್ಪ:- ನಾನು ಹೇಳುತ್ತೇನೆ, ತಾವು ಕುಳಿತುಕೊಳ್ಳಿ ನಾನು ಹೇಳುತ್ತೇನೆ. ಪ್ಲಾಸ್ಟಿಕ್ ಪೈಪನ್ನು ಡ್ರಿಪ್ ಇರಿಗೇಷನ್‌ನಲ್ಲಿ ಉಪಯೋಗ ಮಾಡುತ್ತೇವೆ, ನೀವು ಎಂಟರಿ ಟ್ಯಾಕ್ಸನ್ನು ಹಾಕಿದ್ದೀರಿಎಂದು ಹೇಳಿದ್ದೀರಿ. ಈ ವಿಚಾರದಲ್ಲಿ ಮುಂದೆ ಬಂದು 103 ಅಥವಾ 104 ಐಟಂಗಳು ಏನಿವೆ ಅವುಗಳಿಗೆ ಕೇಂದ್ರ ಸರ್ಕಾರ ಹೇಗೆ ಟ್ಯಾಕ್ಸ್ ಹಾಕಿದೆ ಎನ್ನುವುದು ಬಂದಿದೆ. ನಾವು ಯಾವ ಐಟಂಗಳಿಗೆ ಕನ್ಸೀಷನ್ ಕೊಡಬೇಕು ಯಾವ ಐಟಂಗಳಿಗೆ ಕನ್ಸೀಷನ್ ಕೊಡಬಾರದು ಎನ್ನತಕ್ಕ ತೀರ್ಮಾನ ಮಾಡಿಲ್ಲ, ಎಂದು ನಾನು ಶಾಸನ ಸಭೆಯಲ್ಲಿ ಕೂಡ ಹೇಳಿದ್ದೇನೆ. ಅದು ಅಪ್‌ಟು 5 ಪರ್ಸಂಟ್ ಇದೆ. except I think levy sugar, That is fixed 1%. ನನಗೆ ನೆನಪು ಇರುವಹಾಗೆ ಲೆವಿ ಸುಗರ್ 1% ಇದೆ. The rest of the items 7,8 ಪರ್ಸೆಂಟ್ ಇದೆ. ಲೆವಿ ಏನಿಗೆ ಅದು ರೌಂಡ್ ಅಬಾಟ್ 2 ಪರ್ಸೆಂಟ್ ಇದೆ. ಇದು ಈಗಿರತಕ್ಕದ್ದು. Upto 5% one can go. ಅದಕ್ಕೆ ನಾವೇನು ಹೇಳಿದ್ದೇವೆ ಎಂದರೆ, ಇವತ್ತು 103 ಅಥವಾ 104 ಐಟಂಗಳು ಕೇಂದ್ರ ಸರ್ಕಾರದ ಒಪ್ಪಿಗೆಯಾಗಿ ನಮಗೆ ಬಂದರೂ ಕೂಡ ನಾವು ಎಲ್ಲಾ ಐಟಂಗಳ ಮೇಲೆ ಟ್ಯಾಕ್ಸ್ ಹಾಕುವುದಿಲ್ಲ. ಏಕೆಂದರೆ, ಅದರಲ್ಲಿ ಬಡವರ ಐಟಂಗಳು ಕೂಡ ಬರುತ್ತವೆ. ಪುರಸಭೆ ಮತ್ತು ಕಾರ್ಪೊರೇಷನ್ ವ್ಯಾಪ್ತಿಯಲ್ಲಿ ಬರುತ್ತವೆ. ಅವುಗಳ ಮೇಲೆ ಟ್ಯಾಕ್ಸ್ ಹಾಕತಕ್ಕಂಥ ವಿಚಾರ ಸರ್ಕಾರಕ್ಕಿಲ್ಲ ಎನ್ನತಕ್ಕ ಮಾತನ್ನು ನಾನು ಹೇಳಿದ್ದೇನೆ. ಅವು ಯಾವುವು ಎನ್ನುವುದನ್ನು ನೋಡಿ ಆಮೇಲೆ ತೀರ್ಮಾನ ಮಾಡುತ್ತೇವೆ. ಅಪ್‌ಟು 5 ಪರ್ಸೆಂಟ್ ಇದ್ದರೂ ಕೂಡ ನಾವು 5 ಪರ್ಸೆಂಟ್‌ವರೆಗೂ ಹಾಕುವುದಿಲ್ಲ. Far below 5% Entry tax

ಇಟ್ಟು ನಾವು ಹಾಕುತ್ತೇವೆ. ಇದನ್ನು ಮಾಡುವ ಉದ್ದೇಶವಾದರೂ ಏನು ಎಂದರೆ, ಇವತ್ತು ನಮಗೆ ರೆವಿನ್ಯೂ ಜನರೇಟರ್ ಆಗುತ್ತಿಲ್ಲ, ಇನ್‌ಕಂ ಬರುತ್ತಿಲ್ಲ. ಆಕ್ಟ್ರಾಯಿ ಇಂಟರ್‌ಡ್ಯೂಸ್ ಮಾಡಬೇಕೆಂದು ಇದ್ದಾಗ, ಆಕ್ಟ್ರಾಯಿ ಬೇಡ ಎಂಟರಿ ಟ್ಯಾಕ್ಸ್ ತೆಗೆದುಕೊಂಡು ಬನ್ನಿ ಎಂದರು. ಬಿಸಿನೆಸ್ ಕ್ಲಾಸ್‌ನವರು, ಬೇರೆಯವರು ಹೇಳಿದರು. ಇಲ್ಲೂ ಕೂಡ ಸಲಹೆಗಳು ಬಂದವು. ಅದಕ್ಕನುಗುಣವಾಗಿ ಈ ಎಂಟ್ರಿಟ್ಯಾಕ್ಸ್ ತರತಕ್ಕಂಥ ಪ್ರಯತ್ನ ಮಾಡಿರತಕ್ಕದ್ದೇ ಏನ: ಇನ್ನೂ ಯಾವುದೂ ಇಲ್ಲ. ಯಾವ ಪಕ್ಷದ ಸರ್ಕಾರ ಬಂದರೂ, ಏನು ಪ್ರಯತ್ನ ಮಾಡಿದರೂ ಕೂಡ There is no alternative other than bringing it under Entry Tax Act. ನಮಗೆ ಬೆರೆ ದಾರಿಯಿಲ್ಲ. ಬೇರೆ ದಾರಿ ನಮಗೆ ಯಾವುದೂ ಉಳಿದಿಲ್ಲ. ಇಷ್ಟಾದರೂ ಕೂಡ ಬಡವರ ಐಟಂಗಳನ್ನು ಎಕ್ಸ್ ಕ್ಲೂಡ್ ಮಾಡೋಣ. ಅಪ್ ಟು 5 ಪರ್ಸೆಂಟ್ ಹಾಕುವುದು ಬೇಡ, ಅದು ಎಷ್ಟು ಪರ್ಸೆಂಟೇಜ್‌ಗೆ ಹೋಗಿ ನಿಲ್ಲಬೇಕು ಎನ್ನುವುದನ್ನು ನೋಡಿಕೊಳ್ಳೋಣ ಎಂಬ ಉದ್ದೇಶವನ್ನು ನಾವು ಇಟ್ಟುಕೊಂಡಿದ್ದೇವೆ. ಆದ್ದರಿಂದ ಇವೆಲ್ಲ ಸ್ವಾಗತಾರ್ಹವಾದ ಸಲಹೆಗಳೆಂಬ ವಿಚಾರವನ್ನು ನಾವು ಇಟ್ಟುಕೊಂಡಿದ್ದೇವೆ. ಆಮೇಲೆ ಈ ಪಿವಿಸಿಪೈಪ್ಸ್ ಏನಿವೆ, ಇವು ನೀರಾವರಿ ಉದ್ದೇಶಕ್ಕೆ ಇರುವಂಥದ್ದು ಮತ್ತು ನೀರು ಸರಬರಾಜಿಗೆ ಮತ್ತೊಂದಕ್ಕೆ ಇರಬಹುದು. ಅದಕ್ಕೆ ಟ್ಯಾಕ್ಸ್ 6 ಪರ್ಸೆಂಟ್‌ನಿಂದ 3 ಪರ್ಸೆಂಟ್‌ಗೆ ಇಳಿಸುವ ಪ್ರಪೋಸಲ್ ಇದೆ. ಅದನ್ನು ಕಡಿಮೆ ಮಾಡಿದ್ದೇವೆ. ಏಕೆಂದರೆ ರೈತರ ವಿಚಾರದಲ್ಲಿ ನಾವು ಬಹಳ ಮುಂದೆ ಇದ್ದೇವೆ. ವಾಸ್ತವವಾಗಿ ಇದು ಒಂದು ಸ್ಪರ್ಧೆಯಾಗಿಬಿಟ್ಟಿದೆ. ಅಲ್ಲಿ ಒಂದು ಸಲಹೆ ಬಂದರೆ ನಾವು ಇಲ್ಲಿ ಮಾಡುತ್ತಿದ್ದೇವೆ. ಇದರ ಉದ್ದೇಶ, ರೈತರ ಹಿತ ಕಾಪಾಡಬೇಕೆಂಬ ದೃಷ್ಟಿಯಿಂದ ಮಾಡಿರುವುದೇ ಹೊರತು ಬೆರೆ ವಿಚಾರ ಇಲ್ಲ. ಇದು 6 ರಿಂದ 3 ಪರ್ಸೆಂಟ್‌ಮಾಡಿರತಕ್ಕಂಥಾದ್ದು. ತಮಿಳುನಾಡಿನಲ್ಲಿ ಟ್ಯಾಕ್ಸ್ ರೇಟ್ ಎಷ್ಟಿದೆ ಎಂದು ಸ್ವಲ್ಪ ವಿಚಾರ ಮಾಡೋಣ. ಅಲ್ಲಿ 9.2 ಪರ್ಸೆಂಟ್ ಪಿ.ವಿ.ಸಿ. ಪೈಪ್ಸ್ ಮೇಲೆ ಟ್ಯಾಕ್ಸ್ ಇದೆ. ನಾವು ಇಲ್ಲಿ 3 ಪರ್ಸೆಂಟ್‌ಗೆ ತೆಗೆದುಕೊಂಡು ಹೋಗುತ್ತಿದ್ದೇವೆ. ತಾವು ಹೃದಯಾಂತರಾಳದಿಂದ ಇದನ್ನು ಸ್ವಾಗತ ಮಾಡತಕ್ಕಂಥ ವಿಚಾರ ಇದೆ. ಕೇರಳದಲ್ಲಿ 10.4 ಪರ್ಸೆಂಟ್ ಇದೆ. ನಮ್ಮದು 6 ಪರ್ಸೆಂಟ್‌ಇತ್ತು. ಅದನ್ನು 3 ಪರ್ಸೆಂಟ್‌ಗೆ ಇಳಿಸಿದ್ದೇವೆ. ತಮಿಳುನಾಡು, ಕೇರಳಗಿಂತ ನಮ್ಮದು ತುಂಬ ಕಡಿಮೆ ಇದೆ. ಆಂಧ್ರಪ್ರದೇಶದಲ್ಲಿ 7.7 ಪರ್ಸೆಂಟ್ ಇದೆ. ಮಹಾರಾಷ್ಟ್ರದಲ್ಲಿ 8.96 ಪರ್ಸೆಂಟ್ ಇದೆ. ಇಷ್ಟಾದರೂ ನಾವು 6 ಕ್ಕೆ ನಿಲ್ಲಬಹುದಿತ್ತು. ಆದರೂ ನಾವು 6 ರಿಂದ 3 ಪರ್ಸೆಂಟ್‌ಗೆ ಬಂದಿದ್ದೇವೆ.

ಶ್ರೀ ಸಿ.ಭೈರೇಗೌಡ:- ಎಂಟ್ರಿ ಟ್ಯಾಕ್ಸ್ ಹಾಕಿದ್ದೀರಿ.

ಶ್ರೀ ಎಸ್.ಬಂಗಾರಪ್ಪ: ನಂತರ ಎಂಟ್ರಿ ಟ್ಯಾಕ್ಸ್ ನಾವು ಹಾಕಿದರೂ ಕೂಡ ಈಗ ಇರತಕ್ಕಂಥಾದ್ದನ್ನು 6 ಪರ್ಸೆಂಟ್‌ನಿಂದ 3 ಪರ್ಸೆಂಟ್‌ಗೆ ತಂದರೆ ನೀವು 5 ಪರ್ಸೆಂಟ್ ಮತ್ತೆ ಸೇರಿಸಿದರೆ 5 ಮತ್ತು 3ಸೇರಿ 8 ಪರ್ಸೆಂಟ್ ಆಗುತ್ತದೆ. ನಾವು ಮ್ಯಾಕ್ಸಿಮಮ್‌ಗೆ ಹೋಗುವುದಿಲ್ಲ ಆಮೇಲೆ ಡ್ರಿಂಕಿಂಗ್ ವಾಟರ್ ಬರುತ್ತದೆ. ಕುಡಿಯುವ ನೀರಿನ ವಿಚಾರದಲ್ಲಿ ಹಾಹಾಕಾರ ಇರುವುದರಿಂದ ಆ ರೀತಿ ನಾವು ಹಾಕುವುದಿಲ್ಲ.

ಶ್ರೀ ಸಿ.ಭೈರೇಗೌಡ:- ಇದನ್ನು ದಯವಿಟ್ಟು ಕೈಬಿಡುತ್ತೀರಾ ? ಕೋಟ್ಯಾಂತರ ರೂಪಾಯಿ ಈ ಬಾಬಿನಲ್ಲಿ ಏನೂ ಬರುವುದಿಲ್ಲ.

ಶ್ರೀ ಎಸ್.ಬಂಗಾರಪ್ಪ:- ದಯವಿಟ್ಟು ಕುಳಿತುಕೊಳ್ಳಿ. ಎಂಟ್ರಿಟ್ಯಾಕ್ಸ್ ವಿಚಾರ ನಿಮ್ಮ ಮುಂದೆ ನಾವು ತಂದಿಲ್ಲ. ನೀವು ಹೇಳಿದ್ದನ್ನು ಗಮನದಲ್ಲಿಟ್ಟುಕೊಳ್ಳುತ್ತೇವೆ. ಇದರ ಬಗ್ಗೆ ನಿಮಗೆ

ಏನೂ ಅನುಮಾನ ಬೇಡ. ಆದ್ದರಿಂದ ನಿಮ್ಮ ಅಭಿಪ್ರಾಯವನ್ನು ಕೂಡ ಗಮನದಲ್ಲಿಟ್ಟುಕೊಂಡೇ ಮುಂದೆ ಹೋಗುವುದರಿಂದ, ರೈತರಿಗೆ ಮತ್ತು ಬಡವರಿಗೆ ಕುಡಿಯುವ ನೀರು ಪುರಸಭೆ ವ್ಯಾಪ್ತಿಯಲ್ಲಿ ಬರುವುದನ್ನು ಗಮನದಲ್ಲಿಟ್ಟೇ ನಾವು ಮಾಡುತ್ತೇವೆ. ಆದ್ದರಿಂದ ಏನೂ ತೊಂದರೆ ಬರಲಾರದು. ಆದ್ದರಿಂದ ನೀವು ಹೃದಯಪೂರ್ವಕವಾಗಿ ಇದನ್ನು ಸ್ವಾಗತ ಮಾಡಬೇಕು. ನೀವು ಹೇಳಿದ್ದನ್ನು ಗಮನದಲ್ಲಿಟ್ಟುಕೊಂಡೇ ವಜಾ ಮಾಡಿದ್ದೇವೆ, ಇಲ್ಲವೇ ಕಡಿಮೆ ಮಾಡಿದ್ದೇವೆ. ನೀವು ಹೇಳುವುದಕ್ಕೆ ಮೊದಲೇ ತಂದಿದ್ದೇವೆ. ಕೆಲವನ್ನು ಲೆಕ್ಕ ಹಾಕಿದರೆ ಕೋಟಿಗಟ್ಟಲೆ ಬರುತ್ತದೆ, ಅಷ್ಟು ರಿಯಾಯ್ತಿ ಕೊಟ್ಟಿದ್ದೇವೆ. ಇದನ್ನು ನೀವು ವೆಲ್‌ಕಮ್ ಮಾಡದಿದ್ದರೆ ಇನ್ನು ಯಾವುದನ್ನು ವೆಲ್‌ಕಂ ಮಾಡುತ್ತೀರೋ ನನಗಂತೂ ಗೊತ್ತಿಲ್ಲ.

ಶ್ರೀ ಸಿ.ಭೈರೇಗೌಡ:- ವ್ಯವಸಾಯದಲ್ಲಿ ಉಪಯೋಗಿಸತಕ್ಕಂಥ ಪ್ಲಾಸ್ಟಿಕ್‌ಗೆ ನಾಳೆ ನಾವು ಎಂಟ್ರಿಟ್ಯಾಕ್ಸ್ ಹಾಕುವುದಿಲ್ಲ ಎನ್ನತಕ್ಕಂಥ ಒಂದು ಮಾತು ತಮ್ಮ ಬಾಯಿಯಿಂದ ಬಂದುಬಿಟ್ಟರೆ ನಾವು ಸಂಪೂರ್ಣ ಸ್ವಾಗತ ಮಾಡುತ್ತೇವೆ. ಮುಂದೆ ಹಾಕುವುದಿಲ್ಲ ಎಂದು ಈ ಮಾತನ್ನು ಹೇಳಿದರೆ ನಾನು ಈಗಲೇ ಸ್ವಾಗತ ಮಾಡುತ್ತೇನೆ.

ಶ್ರೀ ಎಸ್.ಬಂಗಾರಪ್ಪ:- ಇದು ಬಹುಮತ ಇದೆ ಅಥವಾ ಇಲ್ಲ ಎನ್ನತಕ್ಕಂಥ ಪ್ರಶ್ನೆ ಅಲ್ಲ. ಇವತ್ತು ಕುಡಿಯುವ ನೀರು ಬೇರೆ, ಮತ್ತೊಂದು ಬೇರೆ ಎಂದು ನಾವು ಮಾಡುವುದಿಲ್ಲ. ಒಂದುವೇಳೆ ಎಂಟ್ರಿ ಟ್ಯಾಕ್ಸ್ ಹಾಕಬೇಕು ಎಂದರೆ, ಪುರಸಭೆ ವ್ಯಾಪ್ತಿಯೊಳಗೆ ಪೈಪುಗಳಿಗೆ ಹೋಗುತ್ತವೆ ಎಂದರೆ, ಎಂಟ್ರಿ ಟ್ಯಾಕ್ಸ್ ಬಿದ್ದರೆ ನಾಳೆ ಇರಿಗೇಷನ್ ಪರ್ಪಸ್‌ಗೋಸ್ಕರ ಕೂಡ ಅತ ಕೊಂಡು ಕೊಂಡು ಹೋಗುತ್ತಾನೆ. ಏಕೆಂದರೆ ಅಂಗಡಿಗಳೆಲ್ಲ ಪುರಸಭೆ ವ್ಯಾಪ್ತಿಯೊಳಗಿರುತ್ತದೆ. ನೀವು ಎಂಟ್ರಿ ಟ್ಯಾಕ್ಸ್ ಹಾಕಿದರೆ ಕುಡಿಯುವ ನೀರು ಮತ್ತು ವ್ಯವಸಾಯ ಎರಡಕ್ಕೂ ಸಂಬಂಧಪಟ್ಟಂತೆ ಬರುತ್ತದೆ. ಆದ್ದರಿಂದ ಇದನ್ನು ಹಾಕಬೇಕಾದರೆ ನಾನು ಬಹಳ ಜಾಗರೂಕನಾಗಿದ್ದೇನೆ. ನಿಮ್ಮ ಸಲಹೆಯನ್ನು ಗಮನಿಸಿಯೇ ಮುಂದೆ ಹೋಗುತ್ತೇವೆ. ಅದರ ಬಗ್ಗೆ ಅನುಮಾನ ಬೇಡ. ಆದರೆ ಈಗ ಅದರ ಬಗ್ಗೆ ಚರ್ಚೆಬೇಡ. ನಾವು ತೀರ್ಮಾನ ಮಾಡಬೇಕಾದರೆ ಮುಂದೆ ಬರುತ್ತದೆ. ಹಾಗೆ ತೀರ್ಮಾನ ಮಾಡತಕ್ಕಂಥ ಕಾಲದಲ್ಲಿ ಅದನ್ನು ತೆಗೆದುಕೊಳ್ಳೋಣ. ರೈತರ ಹಿತವನ್ನು ಗಮನದಲ್ಲಿಟ್ಟುಕೊಂಡೇ ನಾವು ಮುಂದೆ ಹೋಗುತ್ತೇವೆ. ವಾಸ್ತವವಾಗಿ ಡ್ರಿಪ್ ಇರಿಗೇಶನ್‌ಗೆ ಉಪಯೋಗಿಸತಕ್ಕ ಪೈಪುಗಳಿಗೆ ಕನ್ಸಿಶನ್ ಅನ್ನು ಬಜೆಟ್‌ನಲ್ಲೇ ಹಾಕಿದ್ದೇವೆ. ಅದು ಎಷ್ಟೋ ಲಕ್ಷ ಕೊಟ್ಟಿದ್ದೇವೆ.

ಶ್ರೀ ಸಿ.ಭೈರೇಗೌಡ:- ಹಾಗೆ ಮಾಡಬೇಡಿ. ಇದಕ್ಕೆ ಕೇಂದ್ರ ಸರ್ಕಾರದಿಂದ ಸಬ್ಸಿಡಿ ಇದೆ.

ಶ್ರೀ ಎಸ್.ಬಂಗಾರಪ್ಪ:- ಹೌದು. ಅಲ್ಲಿ ಕನ್ಸಿಷನ್ ಕೊಟ್ಟು ಇಲ್ಲಿ ಹಾಕಿದರೆ ಅದು ಸರಿಯಲ್ಲ. ಲಿಸ್ಟ್‌ನಲ್ಲಿ 103 ಐಟಮ್ಸ್ ಒಂದೊಂದಾಗಿ ಬರುತ್ತದೆ. ಅದನ್ನು ಒಟ್ಟಿಗೆ ತೆಗೆದುಕೊಳ್ಳೋಣ. ಇಲ್ಲಿ ಕನ್ಸಿಶನ್ ಕೊಟ್ಟು ಮತ್ತೊಂದು ಕಡೆ ಹಾಕಿದರೆ ಏನು ಉಪಯೋಗ? ಅದನ್ನು ಗಮನದಲ್ಲಿಟ್ಟುಕೊಳ್ಳುತ್ತೇನೆ. ಈಗಲಾದರೂ ಮನಸ್ಸಿಗೆ ಸಮಾಧಾನ ಆಯಿತೇ? ಇನ್ನಾದರೂ ಸ್ವಾಗತ ಮಾಡುತ್ತೀರಾ? ಮಾನ್ಯ ಅಧ್ಯಕ್ಷರೇ, ಈಗತಾವು ಇದನ್ನು ತೆಗೆದುಕೊಳ್ಳಬಹುದು.

ಕರ್ನಾಟಕ ಮಾರಾಟ ತೆರಿಗೆ (ತಿದ್ದುಪಡಿ) ವಿಧೇಯಕ, 1992

ಪರ್ಯಾಲೋಚನಾ ಪ್ರಸ್ತಾವ

ಛೇರ್ಮನ್ :-ಪ್ರಸ್ತಾವ ಏನೆಂದರೆ, 1992ರ ಕರ್ನಾಟಕ ಮಾರಾಟ ತೆರಿಗೆ(ತಿದ್ದುಪಡಿ)

ವಿಧೇಯಕವನ್ನು ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

4ನೇ ಖಂಡ

ಶ್ರೀ ಎಸ್.ಬಂಗಾರಪ್ಪ (ಮುಖ್ಯಮಂತ್ರಿಯವರು):- ಮಾನ್ಯ ಅಧ್ಯಕ್ಷರೇ, ತಮ್ಮ ಅಪ್ಪಣೆಯನ್ನು ಪಡೆದು 4ನೇ ಖಂಡಕ್ಕೆ ತಿದ್ದುಪಡಿಯನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

In clause4, in sub-clause(3) Itams (i) and (ii) shall respectively be renumbered as items (ii) and (iii), and before the item (ii) as so renumbered, the following itemshall be inserted, namely:-

(i) in clause (b), the following proviso shall be and shall be deemed to have been inserted with effect from the 3rd day of March, 1992 andshall be and shall be deemed to have been omitted with effect from the 31st day of March, 1992 namely:-

" provided that no tax shall be levied and collected on the purchase of sugarcane purchased by a sugar factory situated in a State other than in Karnataka for its use in that State".

ಛೇರ್ಮನ್:- ಪ್ರಸ್ತಾವ ಏನೆಂದರೆ 4ನೇ ಖಂಡದ ಕೆಳಕಂಡ ತಿದ್ದುಪಡಿಯನ್ನು ಸಭೆಯು ಅಂಗೀಕರಿಸುವುದು.

In clause 4, in sub clause (3), items (i) and (ii) shall respectively be renumbered as items (ii) and (iii), and before the item (ii) as so renumbered, the following item shall be inserted, namely :-

(i) in clause (b), the following proviso shall be and shall be deemed to have been inserted with effect from the 3rd day of March, 1992 and shall be and shall be deemed to have been omitted with effect from the 31st day of March, 1992, namely:-

"provided that no tax shall be levied and collected on the purchase of sugarcane purchased by a sugar factory situated in a State other that in Karnataka for its use in the State."

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು)

(ತಿದ್ದುಪಡಿಯಾದ 4ನೇ ಖಂಡ ವಿಧೇಯಕದ ಅಂಗವಾಯಿತು)

ಖಂಡ 5 ರಿಂದ 14ರವರೆಗೆ

ಛೇರ್ಮನ್:- ಪ್ರಸ್ತಾವ ಏನೆಂದರೆ, ಖಂಡ 5 ರಿಂದ 14ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ 5 ರಿಂದ 14ರವರೆಗೆ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು.

ಖಂಡ : 15

ಶ್ರೀ ಎಸ್.ಬಂಗಾರಪ್ಪ (ಮುಖ್ಯಮಂತ್ರಿ ,:- ಖಂಡ 15ಕ್ಕೆ ಕೆಳಕಂಡ ತಿದ್ದುಪಡಿಯನ್ನು ಸೂಚಿಸಲು ತಮ್ಮ ಅಪ್ಪಣೆ ಕೋರುತ್ತೇನೆ.

In clause 15, in the table, the serial No. 38, in column 3, for the words " Four percent" in the two places where they occur, the words "Two percent" shall be substituted.

ಛೇರ್ಮನ್:-ಪ್ರಸ್ತಾವ ಏನೆಂದರೆ, 15ನೇ ಖಂಡಕ್ಕೆ ಕೆಳಕಂಡ ತಿದ್ದುಪಡಿಯನ್ನು ಅಂಗೀಕರಿಸುವುದು.

In clause 15, in the table, in seriai No. 38, in column 3, for the words "Four percent" in the two places where they occur, the words "Two percent" shall be substituted.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ತಿದ್ದುಪಡಿಯಾದ 15ನೇ ಖಂಡ ವಿಧೇಯಕದ ಅಂಗವಾಯಿತು)

ಖಂಡ 16 ರಿಂದ 26 ರವರೆಗೆ

ಛೇರ್ಮನ್:- ಖಂಡ 16 ರಿಂದ 26ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ 16 ರಿಂದ 26ರವರೆಗೆ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು.)

(2.00 ಪಿ.ಎಂ.)

ಶ್ರೀ ಎಸ್.ಬಂಗಾರಪ್ಪ(ಮುಖ್ಯಮಂತ್ರಿಗಳು):- ಮಾನ್ಯ ಸಭಾಧ್ಯಕ್ಷರೇ, ತಮ್ಮ ಅನುಮತಿಯನ್ನು ಪಡೆದು ಖಂಡ 27 ಉಪ ಖಂಡ 1ಕ್ಕೆ ಈ ಕೆಳಗಿನ ತಿದ್ದುಪಡಿಯನ್ನು ಮಂಡಿಸುತ್ತಿದ್ದೇನೆ, ತಿದ್ದುಪಡಿ ಈ ರೀತಿ ಇದೆ :

In clause 27, -

(i) in sub-clause (2), for the words "There percent", the words "Two percent" shall be substituted.

(ii) sub-clause (6), shall be omitted

(iii) sub-clauses (7) to (70) shall respectively be renumbered as sub-clauses (6) to (69).

ಛೇರ್ಮನ್ :- ತಿದ್ದುಪಡಿ ಮಂಡಿಸಲಾಗಿದೆ. ಈಗ ಪ್ರಸ್ತಾವ ಏನೆಂದರೆ, ಖಂಡ 27 ಉಪ ಖಂಡ 1 ಕ್ಕೆ ಕೆಳಕಂಡ ತಿದ್ದುಪಡಿಯನ್ನು ಅಂಗೀಕರಿಸುವುದು.

In clause 27,..

(i) in sub-clause (2), for the words "Three Percent", the words "Two percent" shall be substituted.

(ii) sub-clause (6) shall be omitted.

(iii) sub-clauses (7) to (70) shall respectively renumbered as sub-clauses (6) to (69).

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ತಿದ್ದುಪಡಿಯಾದಂತೆ 27ನೇ ಖಂಡ ವಿಧೇಯಕದ ಅಂಗವಾಯಿತು.

ಖಂಡ 28 ರಿಂದ 30

ಛೇರ್ಮನ್:- ಪ್ರಸ್ತಾಪ, ಖಂಡ 28 ರಿಂದ 30 ವಿಧೇಯಕದ ಅಂಗವಾಗಿರುತ್ತದೆ " ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ 28 ರಿಂದ 30 ವಿಧೇಯಕದ ಅಂಗವಾಯಿತು)

ಖಂಡ 31ಕ್ಕೆ ತಿದ್ದುಪಡಿ ಸೂಚನೆ

ಶ್ರೀ ಎಸ್.ಬಂಗಾರಪ್ಪ (ಮುಖ್ಯಮಂತ್ರಿಗಳು):- ಮಾನ್ಯ ಅಧ್ಯಕ್ಷರೇ, ಖಂಡ31 ಕ್ಕೆ ಈ ಕೆಳಕಂಡ ತಿದ್ದುಪಡಿಯನ್ನು ತಮ್ಮ ಅನುಮತಿಯನ್ನು ಪಡೆದು ಮಂಡಿಸಲು ಇಚ್ಚಿಸುತ್ತೇನೆ. ತಿದ್ದುಪಡಿ ಈ ರೀತಿ ಇದೆ.

In clause 31, in sub-clause (5), in cloumn (3), in the entries relating to serial No. 37,

(i) in item (i), for the words "four percent) the words "Two percent" shall be substituted.

(ii) in item (ii), for the words "Eight percent ", the words "Two percent" shall be substituted.

ಛೇರ್ಮನ್:- ಖಂಡ 31ಕ್ಕೆ ಮಾನ್ಯ ಮುಖ್ಯಮಂತ್ರಿಗಳು ತಿದ್ದುಪಡಿಯನ್ನು ಮಂಡಿಸಿದ್ದು ಅದು ಈ ರೀತಿ ಇದೆ,

In clause 31, in sub-clause (5), in column (3), in the entires relating to serial No. 37,-

(i) in item (i), for the words " four percent" the words "Two percent" shall be substituted.

(ii) in item (ii), for the words "Eight percent" the words"two percent" shall be substituted.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ 31 ತಿದ್ದುಪಡಿಯಾದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ತಿದ್ದುಪಡಿಯಾದ ಖಂಡ 31 ವಿಧೇಯಕದ ಅಂಗವಾಯಿತು.

ಖಂಡ 32 ಮತ್ತು 33

ಛೇರ್ಮನ್:-ಪ್ರಸ್ತಾವ ಏನೆಂದರೆ , ಖಂಡ 32 ಮತ್ತು 33 ವಿಧೇಯಕದ ಅಂಗವಾಗಿರುತ್ತದೆ

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು.

(ಖಂಡ 32 ಮತ್ತು 33 ವಿಧೇಯಕದ ಅಂಗವಾಯಿತು)

ಮೊದಲನೇ ಖಂಡ. ಹೆಸರು, ಅವತರಣಿಕೆ ಇತ್ಯಾದಿ

ಛೇರ್ಮನ್:- ಪ್ರಸ್ತಾವ ಏನೆಂದರೆ, ಮೊದಲನೇ ಖಂಡ ಹೆಸರು ಮತ್ತು ಅವರತಣಿಕೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು.

(ಪ್ರಸ್ತಾಪಕ್ಕೆ ಅಂಗೀಕಾರ ದೊರೆಯಿತು ಮತ್ತು ಮೊದಲನೇ ಖಂಡ, ಹೆಸರು ಮತ್ತು ಅವತರಣಿಕೆ ಇತ್ಯಾದಿಗಳು ವಿಧೇಯಕದ ಅಂಗವಾಯಿತು)

ಪ್ರಸ್ತಾವ ಅಂಗೀಕಾರ

ಶ್ರೀ ಎಸ್.ಬಂಗಾರಪ್ಪ: (ಮುಖ್ಯಮಂತ್ರಿಗಳು):- ಮಾನ್ಯ ಅಧ್ಯಕ್ಷರೇ, 1992ನೇ ಸಾಲಿನ ಮಾರಾಟ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಈ ಸಭೆಯು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು:- ಪ್ರಸ್ತವ ಏನೆಂದರೆ, 1992ನೇ ಸಾಲಿನ ಕರ್ನಾಟಕ ಮಾರಾಟ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕಕ್ಕೆ ಒಪ್ಪಿಗೆ ನೀಡಲಾಯಿತು.

1992ರ ಕರ್ನಾಟಕ ವೃತ್ತಿಗಳು, ಕಸುಬುಗಳು, ಅಜೀವಿಕೆಗಳು ಮತ್ತು ಉದ್ಯೋಗಗಳ ಮೇಲಣ ತೆರಿಗೆ (ತಿದ್ದುಪಡಿ) ವಿಧೇಯಕ

ಶ್ರೀ ಎಸ್.ಬಂಗಾರಪ್ಪ: (ಮುಖ್ಯಮಂತ್ರಿಗಳು):- ಮಾನ್ಯ ಅಧ್ಯಕ್ಷರೇ, 992ರ ಕರ್ನಾಟಕ ವೃತ್ತಿಗಳು, ಕಸಬುಗಳು, ಅಜೀವಿಕೆಗಳು ಮತ್ತು ಉದ್ಯೋಗಗಳ ಮೇಲಣ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

+ ಶ್ರೀ ಎಸ್.ಬಂಗಾರಪ್ಪ :(ಮುಖ್ಯಮಂತ್ರಿಗಳು):- ಮಾನ್ಯ ಅಧ್ಯಕ್ಷರೇ, ನಾನು ನನ್ನ ಬಜೆಟ್ ಭಾಷಣದಲ್ಲಿ ಕೆಲವು ಪ್ರಸ್ತಾಪಗಳನ್ನು ಕಾರ್ಯರೂಪಕ್ಕೆ ತರಬೇಕೆಂಬ ಉದ್ದೇಶದಿಂದ ಪ್ರಸ್ತಾಪ ಮಾಡಿದ್ದೆ. ಅದರ ಮೇಲೆ ಕರ್ನಾಟಕ ವೃತ್ತಿಗಳು, ಕಸಬುಗಳು, ಅಜೀವಿಕೆಗಳು ಮತ್ತು ಉದ್ಯೋಗಗಳ ಮೇಲಣ ತೆರಿಗೆ ವಿಧೇಯಕ 1976 ತಿದ್ದುಪಡಿ ತರಬೇಕೆನ್ನುವ ಉದ್ದೇಶ ಇಟ್ಟು ಇದನ್ನು ಮಾಡಿದ್ದೇವೆ. ಇದರಲ್ಲಿ ಕೆಲವು ತಿದ್ದುಪಡಿಗಳನ್ನು ತಾವು ನೋಡಿದರೆ ಗೊತ್ತಾಗುತ್ತದೆ. ಎರಡನೇ ಪುಟದಲ್ಲಿ ಮೂಲ ಅಧಿನಿಯಮದ ಅನುಸೂಚಿಯಲ್ಲಿ ಒಂದನೇ ಕ್ರಮಾಂಕದಲ್ಲಿ ಬಿ ಮತ್ತು ಸಿ ಬಾಬುಗಳಿಗೆ ಸಂಬಂಧಪಟ್ಟಂತೆ ಈ ರೀತಿಯಾಗಿ ಪ್ರಸ್ತಾಪ ಮಾಡಿದ್ದೇವೆ. 2000 ರೂಪಾಯಿಗಳಿಗೆ ಕಡಿಮೆ ಇಲ್ಲದ ಅಂದರೆ ತಿಂಗಳೊಂದಕ್ಕೆ 3 ಸಾವಿರ ರೂಪಾಯಿಗಳಿಗೆ ಕಡಿಮೆ ಇರತಕ್ಕಂಥ ಈ ಬಾಬುಗಳಿಗೆ 30 ರೂಪಾಯಿ, 3 ಸಾವಿರದಿಂದ 4 ಸಾವಿರ ವರೆಗೆ ಕಡಿಮೆ ಇರುವುದಕ್ಕೆ 40 ರೂಪಾಯಿಗಳು 4 ಸಾವಿರಕ್ಕೂ ಕಡಿಮೆ ಇಲ್ಲದೆ ಇರುವ ಐಟಂಗಳಿಗೆ 50 ರೂಪಾಯಿಗಳು. ಅದೇ ರೀತಿಯಾಗಿ ಎರಡನೇ ಕ್ರಮಾಂಕದಲ್ಲಿ ಕೂಡ ಹಾಕಿಕೊಳ್ಳಬೇಕು ಎನ್ನತಕ್ಕಂಥ ವಿಚಾರವನ್ನು ಹೇಳಿದ್ದೇನೆ. ಮೂರನೇ ಅಂಕಣದಲ್ಲಿ 300 ರೂಪಾಯಿ, 500 ರೂಪಾಯಿ, 100 ರೂಪಾಯಿ, 200 ರೂಪಾಯಿ , 3 ಸಾವಿರದ ಅಂಕೆಗಳಿಗೆ ಅನುಕ್ರಮವಾಗಿ 330-550-110-220-330 ಅಂಕೆಗಳನ್ನು ಪ್ರಸ್ತಾಪ ಮಾಡಬೇಕೆಂದು ಇದೆ. ಅನಂತರ ಎರಡನೇ 'ಎ' ಕ್ರಮಾಂಕಕ್ಕೆ ಸಂಬಂಧಪಟ್ಟ ನಮೂದುಗಳಿಗೆ 3ನೇ ಅಂಕಣದಲ್ಲಿ, ವರ್ಷವೊಂದಕ್ಕೆ 500ರೂಪಾಯಿಗಳು ಎಂಬ ಪದಗಳಿಗೆ ವರ್ಷವೊಂದಕ್ಕೆ 550 ರೂಪಾಯಿ ಎಂಬ ಅಂಕೆಗಳನ್ನು ಹಾಕಿಕೊಳ್ಳಬೇಕೆನ್ನುವ ವಿಚಾರವನ್ನು ನಾವು ತಿಳಿಸಿದ್ದೇವೆ ಇದರಲ್ಲಿ ಕೆಲವು ವಿಷಯಗಳಿಗೆ ನಾವು ಬೆಂಗಳೂರು ನಗರ ಸಮುಚ್ಚಯ ಅಥವಾ ಜಿಲ್ಲಾ ಕೇಂದ್ರಗಳು ಮುನಿಸಿಪಲ್ ಪರಿಮಿತಿ